ವರದಿ ಮಾಡಬಹುದಾಗಿದೆ

ಭಾರತದ ಸರ್ವೋಚ್ಚ ನ್ಯಾಯಾಲಯ

ಕ್ರಿಮಿನಲ್ ಅಪೀಲು ಅಧಿಕಾರವ್ಯಾಪ್ತಿ

ಕ್ರಿಮಿನಲ್ ಅಪೀಲ್ ನಂ. 1109–1110/2010

ದಿನಾಂಕ: 16ನೇ ಮಾರ್ಚ್ 2023

ರಾವಸಾಹೆಬ್ @ರಾವಸಾಹೆಬ್ ಗೌಡಾ ಹಾಗೂ ಇತರರು **ಮೇಲ್ಮನವಿದಾರರು**

ವಿರುದ್ಧ

ಕರ್ನಾಟಕ ಸರಕಾರ **ಪ್ರತ್ಯರ್ಜಿದಾರ**

ಜೊತೆಗೆ

ಕ್ರಿಮಿನಲ್ ಅಪೀಲು ನಂ. 1229/2011, ಕ್ರಿಮಿನಲ್ ಅಪೀಲು ನಂ.1230/2011,

ಕ್ರಿಮಿನಲ್ ಅಪೀಲು ನಂ. 213/2012 ಮತ್ತು ಕ್ರಿಮಿನಲ್ ಅಪೀಲು ನಂ.682/2013

ತೀರ್ಪು

ನ್ಯಾಯಮೂರ್ತಿ ಸಂಜಯ್ ಕರೋಲ್

1. ಅಧೀನ ನ್ಯಾಯಾಲಯಗಳು ಎತ್ತಿ ಹಿಡಿದಿರುವಂತೆ, ಸಾಕ್ಷಿಯೊಬ್ಬರ ಸಾಕ್ಷ್ಯಾಧಾರದ ಆಧಾರದ ಮೇಲೆ ಎಂಟು ಪುರುಷರನ್ನು ಆಜೀವ ಸೆರೆವಾಸದ ಶಿಕ್ಷೆಗೆ ಒಳಪಡಿಸಬಹುದೇ ಎಂಬುದು ಪರಿಗಣನೆಗೆ ಬರುವಂತಹ ಏಕೈಕ ವಿಷಯವಾಗಿದೆ.

ಮೇಲೆ ತಿಳಿಸಿದಂತೆ ಈ ಪ್ರಕರಣದ ಏಕೈಕ ಪ್ರತ್ಯಕ್ಷದರ್ಶಿಯಾದ ಯಂಕಪ್ಪ ಪಂಚಗವಿಯ (ಪಿಡಬ್ಲ್ಯು–1) ಸಾಕ್ಷ್ಯವು ವಿಶ್ವಾಸಾರ್ಹವಾಗಿದೆಯೇ? ಅವನು ನಂಬಲರ್ಹನೇ? ಎಂದು ಪರಿಶೀಲಿಸುವುದು ನಮ್ಮ ಕರ್ತವ್ಯವಾಗಿದೆ. ಹಾಗೂ "ಅವನು ಸತ್ಯವನ್ನು ನುಡಿದಿದ್ದಾನೆಯೇ?" ಅವನ ಸಾಕ್ಷ್ಯ ವಿಶ್ವಾಸಾರ್ಹವೇ ಹಾಗೂ ಅದು ಅಲಂಕಾರಗಳು, ತಿದ್ದುಪಡಿಗಳು ಅಥವಾ ವಸ್ತು ವ್ಯತ್ಯಾಸಗಳಿಂದ ಮುಕ್ತವಾಗಿದ್ದು, ಸಾಕ್ಷ್ಯವನ್ನು ಅಸ್ಥಿರಗೊಳಿಸುತ್ತದೆಯೇ ಅಥವಾ ಅನುಮಾನಾಸ್ಪದವಾಗಿಸುತ್ತದೆಯೇ? ಮತ್ತು ಪ್ರಾಸಿಕ್ಯೂಷನ್ ಎಲ್ಲಾ ಆರೋಪಿಗಳ ವಿರುದ್ಧ ಸಮಂಜಸವಾಗಿ ಅನುಮಾನ ಪಡುವುದಕ್ಕೆ ಆಸ್ಪದ ಇಲ್ಲದಂತೆ ತನ್ನ ಮೊಕದ್ದಮೆಯನ್ನು ಸ್ಥಾಪಿಸಿದೆಯೇ ಅಥವಾ ಇಲ್ಲವೇ? ಇವೆಲ್ಲವನ್ನೂ ನಾವು ಈಗ ಪರಿಶೀಲಿಸಬೇಕಾಗಿದೆ.

2. ಜಮಖಂಡಿ ತಾಲ್ಲೂಕಿನ ಕಲ್ತಿಪ್ಪಿ ಗ್ರಾಮದಲ್ಲಿ ಒಬ್ಬ ಸತ್ಯಪ್ಪ ಎಂಬ ವ್ಯಕ್ತಿಯನ್ನು ಹಾಡ ಹಗಲೇ ಕೊಲೆ ಮಾಡಲಾಗಿದೆ ಎಂಬ ವಿಷಯ ಇಲ್ಲಿ ವಿವಾದಿತವಾಗಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಅದೇ ದಿನ ಅಂದರೆ 13.08.2004ರಂದು ಸಂಜೆ 4.00 ಗಂಟೆಗೆ ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ತೆರೆದಾಳ ಪೊಲೀಸ್ ಠಾಣೆಯಲ್ಲಿ ಒಂದು ವರದಿಯನ್ನು ದಾಖಲು ಮಾಡಲಾಗಿದೆ ಎಂಬುದು ಸಹ ವಿವಾದಿತವಾಗಿಲ್ಲ. ತನಿಖೆ ನಡೆಸಿದ ತನಿಖಾಧಿಕಾರಿ ಶ್ರೀ ಹನಮಪ್ಪ ಸಂಗಪ್ಪ ಕೇರಿ (ಪಿಡಬ್ಲ್ಯು–32) ಇವರು ಸ್ಥಳಕ್ಕೆ ಭೇಟಿ ನೀಡಿ ಪ್ರಾಥಮಿಕ ತನಿಖೆ ನಡೆಸಿ, ಮೃತ ದೇಹವನ್ನು ತಮ್ಮ ವಶಕ್ಕೆ ಪಡೆದು, ಡಾ.

ಶಬ್ಬೀರ್ ಪಟೇಲ್ ಪಿಡಬ್ಲ್ಯು–27 ರವರಿಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿದ್ದರು ಎಂಬುದು ಸಹ ಇಲ್ಲಿ ವಿವಾದಿತವಾಗಿಲ್ಲ. ತಜ್ಞರಿಂದ ಸಮಂಜಸವಾಗಿ ಸಾಬೀತುಪಡಿಸಲ್ಪಟ್ಟ ಮರಣೋತ್ತರ ಪರೀಕ್ಷೆಯ ವರದಿಯು (ಇಎಕ್ಸ್.ಪಿ.–25), ಮೃತ ವ್ಯಕ್ತಿಯ ದೇಹದ ಪ್ರಮುಖ ವಿವಿಧ ಭಾಗಗಳ ಮೇಲೆ 21 ಬಾರಿ ಚೂರಿ ಇರಿತದ ಗಾಯಗಳಾಗಿವೆ ಎಂದು ರುಜವಾತುಪಡಿಸುತ್ತದೆ. ಹಲವು ಗಾಯಗಳು ಗಂಭೀರ ಸ್ವರೂಪದ್ದಾಗಿದ್ದು, ಅವು ಮಾರಣಾಂತಿಕ ಆಯುಧಗಳಿಂದ ಉಂಟಾಗಿವೆ. ಅವು ದೇಹದ ಎಲ್ಲಾ ಪ್ರಮುಖ ಭಾಗಗಳ ಮೇಲೆ ಆದುದ್ದರಿಂದ, ಮೃತನ ಸಾವಿಗೆ ಕಾರಣವಾದವು. ಇದರಲ್ಲಿ ಸದರಿ ಅಪರಾಧಕ್ಕೆ ಸಂಬಂಧಿಸಿದಂತೆ, ವಿಚಾರಣಾ ನ್ಯಾಯಾಲಯವು, ಕೇವಲ ಎಂಟು ಆರೋಪಿಗಳಾದ ರಾಮಪ್ಪ (ಆರೋಪಿ ಸಂಖ್ಯೆ.1), ಶಂಕರ್ (ಆರೋಪಿ ಸಂಖ್ಯೆ.2), ಕೃಷ್ಣಪ್ಪ (ಆರೋಪಿ ಸಂಖ್ಯೆ.3), ಗುಲಾಪ್ಪ ಗಾವಪ್ಪ ಕರಿಗಾರ್ (ಆರೋಪಿ ಸಂಖ್ಯೆ.4), ಬೀರಪ್ಪ (ಆರೋಪಿ ಸಂಖ್ಯೆ.5), ರಾವಸಾಹೇಬ್ ಲಕ್ಷ್ಮಣ್ ಪಾಟೀಲ್ (ಆರೋಪಿ ಸಂಖ್ಯೆ.6), ಯಂಕಪ್ಪ ಶಿವಪ್ಪ ನಾಯಕ್ (ಆರೋಪಿ ಸಂಖ್ಯೆ.7) ಮತ್ತು ಪರಪ್ಪ @ಗುರಪ್ಪ (ಆರೋಪಿ ಸಂಖ್ಯೆ.8) ಎಂಬ ಹೆಸರಿನವರನ್ನು ವಿವಿಧ ಶಸ್ತ್ರಾಸ್ತ್ರಗಳಾದ ಜಾಂಬಿಯಾ/ಜಂಬೆ (ಹರಿತವಾದ ಆಯುಧ), ಗುಂಡಿ ಚಾಕುಗಳನ್ನು ಬಳಸಿ ಮೃತನನ್ನು ಹತ್ಯೆ ಮಾಡಿದ್ದಕ್ಕಾಗಿ ಶಿಕ್ಷೆ ವಿಧಿಸಿದೆ, ಎಂಬುದನ್ನು ಈ ನ್ಯಾಯಾಲಯವು ಗಮನಿಸಿದೆ ಖಾರದ ಪುಡಿಯನ್ನು ಸಹ ದಾಳಿಯ ಆಯುಧವಾಗಿ ಬಳಸಲಾಗಿದೆ.

3. ಅಧಿವಿಚಾರಣಾ ನ್ಯಾಯಾಲಯದ ಪರಿಗಣನೆಯ ದೃಷ್ಟಿಯಲ್ಲಿ ಬಹುತೇಕ ಪ್ರಾಸಿಕ್ಯೂಷನ್ ಸಾಕ್ಷಿಗಳು (ಒಟ್ಟು 32) ಪ್ರತಿಕೂಲವಾಗಿದ್ದರೂ, ಪ್ರಾಸಿಕ್ಯೂಷನ್‌ನ ಪ್ರಕರಣವು, ಪ್ರತಿಕೂಲ ಸಾಕ್ಷಿಗಳ ಮೇಲೆ ಶಾಸಪ್ಪ ರೆಡ್ಡಿ ಎಂಬ ಹೆಸರಿನ (ಪಿಡಬ್ಲ್ಯು–7) ರ ಸಾಕ್ಷ್ಯದ ನಿರಾಕರಿಸಲಾಗದ ಭಾಗದ ಮೂಲಕ ಸಮರ್ಥಿಸಲ್ಪಟ್ಟ ಪಿಡಬ್ಲ್ಯು–1ರ ನಿರಾಕರಿಸಲಾಗದ ಸಾಕ್ಷ್ಯದ ಮೂಲಕ ನ್ಯಾಯಬದ್ಧವಾದ ಯಾವುದೇ ಸಂಶಯಕ್ಕೆ ಆಸ್ಪದ ಕೊಡದಂತೆ ಸಾಬೀತಾಗಿದೆ. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು ಆರೋಪಿಗಳನ್ನು ದೋಷಿಗಳೆಂದು ಘೋಷಿಸಿತು ಮತ್ತು ಈ ಕೆಳಕಂಡ ಕೋಷ್ಟಕದ ರೂಪದಲ್ಲಿ ಸೂಚಿಸಿದಂತೆ ಅವರಿಗೆ ಕಾರಾವಾಸ ಶಿಕ್ಷೆಯನ್ನು ವಿಧಿಸಿತು.

ಕ್ರಮ ಸಂಖ್ಯೆ	**ಹೆಸರು**	**<u>ಭಾರತೀಯ ದಂಡ ಸಂಹಿತೆ, 1860ರ ಯಾವ ಸೆಕ್ಷನ್ ಅಡಿಯಲ್ಲಿ ಶಿಕ್ಷೆಯನ್ನು ವಿಧಿಸಲಾಗಿದೆ</u>**
1	ರಾಮಪ್ಪ ಶಂಕರ್ (A-1)	143 – ಪ್ರತಿಯೊಬ್ಬರಿಗೂ 6 ತಿಂಗಳ ಸರಳ ಕಾರಾವಾಸ ಮತ್ತು ರೂ. 500/– ದಂಡ 147 – ಪ್ರತಿಯೊಬ್ಬರಿಗೂ 6 ತಿಂಗಳ ಸರಳ ಕಾರಾವಾಸ ಮತ್ತು ರೂ. 500/– ದಂಡ 148 – ಪ್ರತಿಯೊಬ್ಬರಿಗೂ 1 ವರ್ಷ ಸರಳ ಕಾರಾವಾಸ
2	ಶಂಕರ್ (A-2)	
3	ಕೃಷ್ಣಪ್ಪ (A-3)	
4	ಗುಲಾಪ್ಪ ಗಾವಪ್ಪ ಕರಿಗಾರ್ (A-4)	
5	ಬೀರಪ್ಪ (A-5)	

6	ರಾವಸಾಹೇಬ್ ಲಕ್ಷ್ಮಣ್ ಪಾಟೀಲ್ (A-6)	ಮತ್ತು ರೂ. 1000/– ದಂಡ
7	ಯಂಕಪ್ಪ ಶಿವಪ್ಪ ನಾಯಕ್ (A-7)	504 – ಪ್ರತಿಯೊಬ್ಬರಿಗೂ 1 ವರ್ಷ ಸರಳ ಕಾರಾವಾಸ ಮತ್ತು ರೂ. 1000/– ದಂಡ
8	ಪರಪ್ಪ @ಗುರಪ್ಪ (A-8)	302 – ಪ್ರತಿಯೊಬ್ಬರಿಗೂ ಆಜೀವ ಕಾರಾವಾಸ ಮತ್ತು ರೂ. 1000/– ದಂಡ

ಎಲ್ಲಾ ಆರೋಪಿಗಳಿಗೆ ವಿಧಿಸಲಾಗಿರುವ ಏಕರೂಪದ ಶಿಕ್ಷೆಯು ಏಕಕಾಲದಲ್ಲಿ ಚಾಲ್ತಿಯಲ್ಲಿರುವಂತೆ ನಿರ್ಬಂಧಿಸಲಾಗಿದೆ.

4. ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯ ನೀಡಿದ ಕಾರಣಗಳು ಮತ್ತು ನಿರ್ಣಯಗಳನ್ನು ಒಪ್ಪಿಕೊಳ್ಳುವಾಗ, ಭೂಮಿ/ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಪಕ್ಷಕಾರರ ನಡುವಿನ ಪೂರ್ವಭಾವಿ ದ್ವೇಷದ ಅಂಶವನ್ನು ಸಹ ಗಮನಿಸಿದೆ.

5. ನಮ್ಮ ಮುಂದೆ, ಕೇವಲ ಮೂವರು ಆರೋಪಿಗಳಾದ (i) ರಾವಸಾಹೇಬ್

@ ರಾವಸಾಹೇಬ್ ಗೌಡ (A-6), (ii) ಯಂಕಪ್ಪ ಶಿವಪ್ಪ ನಾಯಕ್ (A-7) ಮತ್ತು (iii) ಪರಪ್ಪ @ಗುಲಾಪ್ಪ (A-8) ರವರುಗಳು ಮಾತ್ರ ವಿಶೇಷ ಅನುಮತಿಯ ಈ ಎರಡು ಮೇಲ್ಮನವಿಗಳ ಮೂಲಕ ಸದರಿ ತೀರ್ಪನ್ನು ಪ್ರಶ್ನಿಸಿದ್ದಾರೆ.

6. ಹರಿತವಾದ ಶಸ್ತ್ರಾಸ್ತ್ರಗಳಿಂದ ಉಂಟಾದ ಹಲವಾರು ಗಾಯಗಳ ಪರಿಣಾಮವಾಗಿ ಮೃತನು ಮೃತಪಟ್ಟರು ಎಂದು ನಾವು ಸಂಕ್ಷಿಪ್ತವಾಗಿ ಹೇಳಬಹುದು. ಸಂಕ್ಷಿಪ್ತತೆಗಾಗಿ, ನಾವು ಈಗಾಗಲೇ ಮೇಲೆ ಗಮನಿಸಿದ, ಮೃತರಿಗೆ ದೇಹದ ವಿವಿಧ ಭಾಗಗಳಲ್ಲಿ ಉಂಟಾದ ಗಾಯಗಳು ಮತ್ತು ಇರಿದ ಗಾಯಗಳನ್ನು ಪುನರಾವರ್ತಿಸುವ ಅಗತ್ಯವಿಲ್ಲ. ಬಹುತೇಕ ಗುನ್ನೆ ಸ್ಥಳದ ಸಾಕ್ಷಿಗಳು ಅಥವಾ ಘಟನೆಗೆ ಮೊದಲು ಅಥವಾ ಘಟನೆಗೆ ಕಾರಣವಾದ ಸಾಕ್ಷಿಗಳು ಪ್ರಾಸಿಕ್ಯೂಷನ್ ಅನ್ನು ಸಮರ್ಥಿಸಿಲ್ಲ. ಆದಾಗ್ಯೂ, ಇದರರ್ಥ ಈ ಎಲ್ಲ ಸಾಕ್ಷಿಗಳ ಸಾಕ್ಷ್ಯಗಳು ಆರೋಪಿತರನ್ನು ಸ್ವಾಭಾವಿಕವಾಗಿ ಖುಲಾಸೆಗೊಳಿಸುವುದರೊಂದಿಗೆ ಸ್ವಯಂ ಸ್ತಬ್ಧವಾಗುತ್ತವೆ ಎಂದು ಅರ್ಥವಲ್ಲ.

7. ಭಾರತದ ಸಂವಿಧಾನದ 136ನೇ ಅನುಚ್ಛೇದ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಈ ನ್ಯಾಯಾಲಯವು ಸಾಮಾನ್ಯವಾಗಿ ಅತ್ಯಂತ ವಿಶೇಷ ಸನ್ನಿವೇಶಗಳನ್ನು ಅಥವಾ ಅಧಿವಿಚಾರಣಾ ನ್ಯಾಯಾಲಯಗಳು ಗಂಭೀರ ದೋಷವನ್ನು ಎಸಗಿದ ಸಂದರ್ಭಗಳನ್ನು ಹೊರತುಪಡಿಸಿ, ಒಂದೇ ರೀತಿಯ ನಿರ್ಣಯದ

ಸಂಗತಿಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಒಂದು ವೇಳೆ ಉಚ್ಚ ನ್ಯಾಯಾಲಯವು "ಬಹುಮುಖ್ಯ ಸನ್ನಿವೇಶಗಳು" ಅಥವಾ "ರುಜುವಾತಾದ ಸತ್ಯಾಂಶಗಳು" ಅಥವಾ "ಕ್ರಿಮಿನಲ್ ನ್ಯಾಯಶಾಸ್ತ್ರದ ಸುಸ್ಥಾಪಿತ ತತ್ವಗಳನ್ನು ಉಲ್ಲಂಘಿಸಿದಾಗ ಅಥವಾ ತಪ್ಪಾಗಿ ಅನ್ವಯಿಸಿದಾಗ" ಅಥವಾ ಆರೋಪಿಗಳಿಗೆ ಸಂಶಯದ ಲಾಭವನ್ನು ನೀಡಲು ನಿರಾಕರಿಸಿದಾಗ, ಇತ್ಯಾದಿ ಸನ್ನಿವೇಶಗಳಲ್ಲಿ ಮಾತ್ರ ಈ ನ್ಯಾಯಾಲಯವು ಕಾನೂನಾತ್ಮಕ ತಪ್ಪಾದ ತೀರ್ಮಾನಗಳನ್ನು ಸರಿಪಡಿಸಲು ಮುಂದಾಗುತ್ತದೆ. ತೀರ್ಮಾನಗಳನ್ನು ತಿರುಚುವ ಅನಿವಾರ್ಯ ಸಂದರ್ಭಗಳು ಮತ್ತು ಆರೋಪಿಗಳು ಮುಗ್ಧ/ ಅಪರಾಧಿಗಳಾಗಿದ್ದಾರೆ ಎಂಬುದನ್ನು ಹೊರತುಪಡಿಸಿ ಕೇವಲ ನಾವು ಬೇರೆಯದೇ ತೀರ್ಮಾನಕ್ಕೆ ಬರಲು ಸಾಧ್ಯವಾಗಬಹುದು ಎಂಬ ಕಾರಣಕ್ಕಾಗಿ ನಾವು ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ನಿಸ್ಸಂದೇಹವಾಗಿ, ಸಮಸ್ವರೂಪದ ಅಪರಾಧ ನಿರ್ಣಯಗಳ ನಡುವೆ ಹಸ್ತಕ್ಷೇಪ ಮಾಡಲು ಕೆಲವು ಮಿತಿಗಳಿವೆ.

8. ನಾವು ಸಾಂದರ್ಭಿಕ ಸಾಕ್ಷ್ಯಗಳ ಪ್ರಕರಣದ ವ್ಯವಹರಣೆ ನಡೆಸುತ್ತಿಲ್ಲ. ಇಲ್ಲಿ ಅಪರಾಧಕ್ಕೆ ಸಂಬಂಧಿಸಿದಂತೆ ಮತ್ತು ಅದರ ಕಾರಣ ಈ ಎರಡಕ್ಕೂ ಸಹ ಪ್ರತ್ಯಕ್ಷ ಸಾಕ್ಷ್ಯಗಳಿವೆ.

9. ಈ ಹಂತದಲ್ಲಿ, ದೂರದ ಸೋದರ ಸಂಬಂಧಿಗಳಾದ ಮೃತ ಮತ್ತು ಆರೋಪಿಗಳ ನಡುವಿನ ಸಂಬಂಧವನ್ನು ನಾವು ದಾಖಲಿಸಬಹುದು. ಎರಡೂ

ಪಕ್ಷಕಾರರು ಪರಸ್ಪರರ ಪಕ್ಕದ ಜಮೀನುಗಳ ಮಾಲೀಕರಾಗಿದ್ದು. ಮೃತ (ಸತ್ಯಪ್ಪ), ಯಂಕಪ್ಪ ಪಂಚಗವಿ (ಪಿಡಬ್ಲ್ಯು –1) ಇವನ ಖಾಸಾ ಸಹೋದರ. ಆರೋಪಿ ಸಂಖ್ಯೆ 4 ಮತ್ತು 5 ರವರು ಆರೋಪಿ ಸಂಖ್ಯೆ 1 ಇವನ ಖಾಸಾ ಸಹೋದರರು ಮತ್ತು ಆರೋಪಿ ಸಂಖ್ಯೆ 2 ಮತ್ತು 3 ಆರೋಪಿ ಸಂಖ್ಯೆ 1 ಇವನ ಪುತ್ರರಾಗಿದ್ದಾರೆ. ಆರೋಪಿ ಸಂಖ್ಯೆ 6 ರಿಂದ 8ರವರೆಲ್ಲರೂ ಆರೋಪಿ ಸಂಖ್ಯೆ 1ರಿಂದ 5ರವರೆಗಿನವರ ಸಂಬಂಧಿಕರಾಗಿದ್ದಾರೆ. ಸಾಕ್ಷಿಗಳ ಅದರಲ್ಲೂ ವಿಶೇಷವಾಗಿ ಪಿಡಬ್ಲ್ಯು–1ರ ಸಾಕ್ಷ್ಯದಲ್ಲಿ ಕಂಡಂತೆ ಎತ್ತಿನ ಗಾಡಿ ರಸ್ತೆಯ ಬಳಕೆಗೆ ಸಂಬಂಧಿಸಿದಂತೆ ಉಭಯ ಪಕ್ಷಕಾರರ ನಡುವೆ ವಿವಾದವಿತ್ತು ಎಂಬುದನ್ನು ಈವರೆಗೆ ಅಲ್ಲಗಳೆಯಲಾಗಿಲ್ಲ. ಇದೇ ವಿಷಯಕ್ಕೆ ಸಂಬಂಧಿಸಿದಂತೆ, ಈ ಘಟನೆಗೆ ಆರು ತಿಂಗಳ ಮೊದಲು, ಒಂದು ಜಗಳವಾದಾಗ ಆರೋಪಿ ಸಂಖ್ಯೆ: 1 ದೂರನ್ನು ದಾಖಲಿಸಿದ್ದನು. ಕುಟುಂಬ/ಹಳ್ಳಿಯ ಹಿರಿಯರ ಮಧ್ಯಸ್ಥಿಕೆಯಿಂದ ವಿವಾದವನ್ನು ಪರಿಹರಿಸಲಾಯಿತು. ಆದಾಗ್ಯೂ, ಸದರಿ ಸಾಕ್ಷಿದಾರನ ಹೇಳಿಕೆಯ ಪ್ರಕಾರ ಆ ವಿವಾದ ಮುಂದುವರಿಯಿತು ಎಂದು ಆರೋಪಿಸಲಾಗಿದೆ. ಉಭಯ ಪಕ್ಷಕಾರರ ಸಂಬಧಿಕರಾದ ಶಾಸಪ್ಪ ರೆಡ್ಡಿ (ಪಿಡಬ್ಲ್ಯು–7) ಇವರು, ಆರಂಭದಲ್ಲಿ "ಮೃತ ಸತ್ಯಪ್ಪ ಮತ್ತು ಆರೋಪಿಗಳ ನಡುವೆ ಯಾವುದೇ ವಿವಾದವಿರಲಿಲ್ಲ" ಎಂದು ನುಡಿದರೂ ಸಹ ಮುಂದೆ ತಾವಾಗಿಯೇ ಘಟನೆಗೆ 15 ದಿನಗಳ ಮೊದಲು, ಭೂಮಿಗೆ ಸಂಬಂಧಿಸಿದ ವಿಷಯದಲ್ಲಿ ವಿವಾದ ಉದ್ಭವಿಸಿತ್ತು ಮತ್ತು "ನನ್ನ ಸಲಹೆಯ ಪ್ರಕಾರ ಆರೋಪಿ ಸಂಖ್ಯೆ 1 ರಾಮಪ್ಪ, ಸತ್ಯಪ್ಪನಿಗೆ ಹಾದುಹೋಗುವ ದಾರಿಯನ್ನು ಒದಗಿಸಲಿಲ್ಲ" ಎಂದು

ಸ್ಪಷ್ಟಪಡಿಸಿದ್ದಾನೆ. ಪಾಂಡಪ್ಪ ಸಿದ್ದಾರೆಡ್ಡಿ (ಪಿಡಬ್ಲ್ಯು–8) ಸಹ ಭೂಮಿಗೆ ಸಂಬಂಧಿಸಿದಂತೆ ಪಕ್ಷಕಾರರ ನಡುವಿನ ವಿವಾದದ ಅಂಶವನ್ನು ಬಹಿರಂಗಪಡಿಸಿರುತ್ತಾನೆ. ಹೀಗಾಗಿ ನಮ್ಮ ತಿಳುವಳಿಕೆಯಲ್ಲಿ, ಪರಸ್ಪರರ ನಡುವಿನ ವಿವಾದದ ಅಂಶಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯಗಳ ನಿರ್ಣಯಗಳು ದಾಖಲೆಯಲ್ಲಿರುವ ವಸ್ತುಗಳಿಂದ ಅಥವಾ ಪ್ರಾಸಿಕ್ಯೂಷನ್ ಮಂಡಿಸಿರುವ ಸಾಕ್ಷ್ಯಾಧಾರಗಳ ತಪ್ಪಾದ ಮೌಲ್ಯಮಾಪನದಿಂದ ಉದ್ಭವಿಸಿಲ್ಲ ಎಂದು ಹೇಳಲು ಸಾಧ್ಯವಿಲ್ಲ.

10. ತದನಂತರ ಪರಿಗಣನೆಗೆ ಬರುವ ಪ್ರಶ್ನೆ ಏನೆಂದರೆ ಈ ಅಪರಾಧವನ್ನು ಯಾರು ಮಾಡಿದ್ದಾರೆ ಮತ್ತು ಯಾವ ರೀತಿಯಲ್ಲಿ ಮಾಡಿದ್ದಾರೆ ಎಂಬುದಾಗಿದೆ. ಅಧಿವಿಚಾರಣಾ ನ್ಯಾಯಾಲಯಗಳು ಏಕಕಾಲಕ್ಕೆ, ಪಿಡಬ್ಲ್ಯು–1ರ ಸಾಕ್ಷ್ಯವನ್ನು ಸಂಪೂರ್ಣವಾಗಿ ಪುರಸ್ಕರಿಸಿ, ಮೇಲೆ ಉಲ್ಲೇಖಿಸಲಾದ ವಿವಿಧ ಶಸ್ತ್ರಾಸ್ತ್ರಗಳನ್ನು ಬಳಸುವ ಮೂಲಕ ಆರೋಪಿಗಳು ಅಪರಾಧವೆಸಗಿದ್ದಾರೆ ಎಂಬುದನ್ನು ಕಂಡುಹಿಡಿದಿದೆ.

11. ಮತ್ತಷ್ಟು ವಿವರವಾಗಿ ಹೇಳುವುದಾದರೆ, ಪಿಡಬ್ಲ್ಯು–1 ರ ಸಾಕ್ಷ್ಯವನ್ನು ಪರಿಶೀಲಿಸಿದಾಗ 13.08.2004ರಂದು ಅಂದರೆ, ಆ ದುರಂತದ ದಿನದಂದೇ ಆತ ಮತ್ತು ಮೃತ ವ್ಯಕ್ತಿ ಇಬ್ಬರೂ ತೆರೆದಾಳ ಎನ್ನುವ ಸ್ಥಳದಲ್ಲಿ ಭೇಟಿಯಾಗಿದ್ದರು, ಅಲ್ಲಿ ಮೃತರು ಗ್ರಾಮೀಣ ಬ್ಯಾಂಕ್ ಸಸಲಟ್ಟಿ ಶಾಖೆಯಿಂದ ತೆಗೆದ ರೂ 50,000/– ಹಣವನ್ನು ಆತನಿಗೆ ನೀಡಿದ್ದರು ಎಂದು ಹೇಳಿಕೆ ನೀಡಿರುವುದನ್ನು ನಾವು ಗಮನಿಸಿದ್ದೇವೆ. ಮೃತ ವ್ಯಕ್ತಿ,

ಮೇವು ಖರೀದಿಸಿದ ನಂತರ ಕಲ್ತಿಪ್ಪಿ ಗ್ರಾಮಕ್ಕೆ (ತನ್ನ ವಾಸಸ್ಥಳ) ತನ್ನ ಸೈಕಲ್‌ನಲ್ಲಿ ಹೊರಟ. ಈ ಸಾಕ್ಷಿಯು ಹಿಂಬದಿ ಸವಾರನಾದ ಅಶೋಕ್ ಮರೇಗುಡ್ಡಿ (ಪಿಡಬ್ಲ್ಯು–19) ಅವರೊಂದಿಗೆ ಆತನನ್ನು ಹಿಂಬಾಲಿಸಲು ಪ್ರಾರಂಭಿಸಿದರು. ದಾರಿಯಲ್ಲಿ ಮಧ್ಯಾಹ್ನ 2.45ರ ಸುಮಾರಿಗೆ ಸಾಕ್ಷಿಯು ಜಾಲಿ ಕಂಟಿ ಮರಗಳ ನಡುವೆ ಅಡಗಿಕೊಂಡಿದ್ದ ಎಲ್ಲಾ ಆರೋಪಿಗಳು (ಸಂಖ್ಯೆ 1 ರಿಂದ 8) ಮೃತ ವ್ಯಕ್ತಿಯ ಕಡೆಗೆ ಓಡಿಹೋಗುತ್ತಿರುವುದನ್ನು ಕಂಡನು. ಆರೋಪಿ ಸಂಖ್ಯೆ 2 ಮತ್ತು 8 'ಲೇ ಸತ್ಯ ಸೂಳೆಮಗನೆ ನಿನ್ನನ್ನು ಕೊಂದು ಹಾಕುತ್ತೇವೆ' ಎಂದು ನಿಂದಿಸಲು ಪ್ರಾರಂಭಿಸಿದರು. ಇದನ್ನು ಗಮನಿಸಿದ ಮೃತ ವ್ಯಕ್ತಿಯು ತಮ್ಮ ಸೈಕಲ್ ಅನ್ನು ಬಿಟ್ಟು ಆ ಜಾಗದಿಂದ ಓಡಿ ಹೋಗಲು ಯತ್ನಿಸಿರುವಾಗ, ಎಲ್ಲಾ ಆರೋಪಿಗಳು ಅವರನ್ನು ಬೆನ್ನಟ್ಟಿದರು. ಆನಂತರ ಆರೋಪಿ ನಂ. 8 ಪರಪ್ಪ @ಗುಲಾಪ್ಪ ಮೃತನ ಮುಖದ ಮೇಲೆ ಮೆಣಸಿನ ಪುಡಿಯನ್ನು ಎಸೆದ; ಆರೋಪಿ ಸಂಖ್ಯೆ 1 ಮತ್ತು 2 ಮೃತನ ಎಡಭಾಗದ ಕುತ್ತಿಗೆ ಮತ್ತು ಎದೆಯ ಮೇಲೆ ಜಂಬೆಯಿಂದ ಹೊಡೆದರು; ಆರೋಪಿ ಸಂಖ್ಯೆ 3 ರಿಂದ 7 ರವರು ಮೃತನ ದೇಹದ ಭಾಗಗಳ ಮೇಲೆ ಗುಂಡಿ ಚಾಕುವಿನಿಂದ ಹಲ್ಲೆ ಮಾಡಿದರು, ಇದರಿಂದಾಗಿ ಮೃತ ವ್ಯಕ್ತಿಯು ಸ್ಥಳದಲ್ಲಿಯೇ ಮೃತ ಪಟ್ಟರು. ಕೂಡಲೇ ಆರೋಪಿಗಳು ಗೋಲಬಾವಿ ಗ್ರಾಮದ ಕಡೆಗೆ ಓಡಿಹೋದರು. ಶಾಸಪ್ಪ ರೆಡ್ಡಿ (ಪಿಡಬ್ಲ್ಯು–7), ಪಾಂಡಪ್ಪ ಸಿದ್ದರೆಡ್ಡಿ (ಪಿಡಬ್ಲ್ಯು–8), ಶ್ರೀಶೈಲ್ (ಪಿಡಬ್ಲ್ಯು–11) ಮತ್ತು ರಾಮಪ್ಪ (ಪಿಡಬ್ಲ್ಯು–12) ರವರುಗಳ ಸ್ಥಳಕ್ಕಾಗಮಿಸಿದಾಗ ಸಾಕ್ಷಿಯು ಸಹಾಯಕ್ಕಾಗಿ ಬೇಡಿದರು. ಅಲ್ಲದೆ, ಪಕ್ಕದ ಭೂ

ಮಾಲೀಕರಾದ, ಲಕ್ಕವ್ವ ಸಿದ್ದಾಪುರ (ಪಿಡಬ್ಲ್ಯು–9) ಮತ್ತು ಸುಶೀಲವ್ವಾ (ಪಿಡಬ್ಲ್ಯು–13) ಆಗಮಿಸಿದರು. ವಕೀಲರಾದ ಹನಮಂತ ಭೀಮಪ್ಪ ರೆಡ್ಡಿ (ಪಿಡಬ್ಲ್ಯು–24) ಮೂಲಕ ದೂರಿನ ಕರಡು ಸಿದ್ಧಪಡಿಸಿದರು ಹಾಗೂ ತಾನು ಅನಕ್ಷರಸ್ಥರಾಗಿದ್ದ ಕಾರಣ ಹೆಬ್ಬೆರಳಿನ ಗುರುತನ್ನು ಒತ್ತಿ ಪೊಲೀಸರಿಗೆ ದೂರು ನೀಡಿದರು.

12. ಗುನ್ನೆ ಸ್ಥಳದಲ್ಲಿ ಆರೋಪಿಗಳ ಉಪಸ್ಥಿತಿಯನ್ನು ಅವರಲ್ಲಿ ಯಾರೊಬ್ಬರೂ ತಳ್ಳಿಹಾಕಿಲ್ಲ ಎಂಬುದನ್ನು ಮಾತ್ರ ನಾವು ಇಲ್ಲಿ ದಾಖಲಿಸಬಹುದು. ಇದನ್ನು ನಾವು ಅವರ ಸಾಕ್ಷಿಗಳ ಪಾಟೀ ಸವಾಲಿನಿಂದ ಅಷ್ಟೇ ಅಲ್ಲದೆ, ಇದರಲ್ಲಿ ಇನ್ನು ಮುಂದೆ ನಾವು ಗಮನಿಸಿದಂತೆ, ಸಾಕ್ಷಿಗಳ ಸಾಕ್ಷ್ಯಗಳ ಮೂಲಕ ದಾಖಲೆಯಾದಂತೆ, ಅವರು ಆರೋಪಿಗಳು ಮೃತಪಟ್ಟ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ ವಿಷಯದ ಬಗ್ಗೆ ಪ್ರಾಸಿಕ್ಯೂಷನ್ಗೆ ಬೆಂಬಲ ನೀಡದಿದ್ದರೂ, ಸದರಿ ಅಂಶವನ್ನು ಬೆಂಬಲಿಸಿದ್ದಾರೆ. ಪಿಡಬ್ಲ್ಯು–1ರ ಸಾಕ್ಷ್ಯದ ಪಾಟೀ ಸವಾಲಿನ ಭಾಗವನ್ನು ಪರಿಶೀಲಿಸಿದಾಗ ಅದು ಗುನ್ನೆ ಸ್ಥಳದಲ್ಲಿನ ಪೊದೆಗಳ ನಡುವೆ ಎಲ್ಲಾ ಆರೋಪಿಗಳು ಅಡಗಿಕೊಂಡಿದ್ದನ್ನು ನಿರಾಕರಿಸಲಾಗದಂತೆ ಬಹಿರಂಗಪಡಿಸುತ್ತದೆ. ಈ ಸಾಕ್ಷಿಯನ್ನು ವ್ಯಾಪಕವಾಗಿ ವಿಚಾರಣೆಗೊಳಪಡಿಸಿದರೂ ಸಹ ಆತನು ಆರೋಪಿಗಳು ಮೃತ ವ್ಯಕ್ತಿಯನ್ನು ಹಿಡಿದು ಅವನ ಮೇಲೆ ಗಂಭೀರ ಸ್ವರೂಪದ ಗಾಯಗಳನ್ನು ಉಂಟುಮಾಡಿದ್ದರ ಪರಿಣಾಮದ ಬಗ್ಗೆ ನುಡಿದ ಸಾಕ್ಷ್ಯದ ಬಗ್ಗೆ ಆತ ಬಹಳ ದೃಢವಾಗಿದ್ದಾನೆ. ಆರೋಪಿಗಳು ಆತನು ತಪ್ಪಿಸಿಕೊಳ್ಳುವುದನ್ನು ತಡೆಯಲು

ಖಾರದ ಪುಡಿಯನ್ನು ಶಸ್ತ್ರಾಸ್ತ್ರವಾಗಿ ಬಳಸಿದ್ದರು ಮತ್ತು ಅವನನ್ನು ನೆಲಕ್ಕೆ ತಳ್ಳಿದ್ದರು. ಅದಾಗ್ಯೂ, ಕೆಳಗೆ ಬಿದ್ದ ನಂತರ ಆರೋಪಿಗಳಲ್ಲಿ ಯಾರು ಮೃತಪಟ್ಟ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ್ದಾರೆಂದು ಸಾಕ್ಷಿಗೆ ನಿಶ್ಚಿತವಾಗಿ ತಿಳಿದಿಲ್ಲವಾದರೂ, ಇದರಲ್ಲಿಯ ಪ್ರತಿಯೊಬ್ಬನೂ ನಿರ್ವಹಿಸಿದ ಪಾತ್ರದ ಬಗ್ಗೆ ಆತನಿಗೆ ಸ್ಪಷ್ಟತೆ ಇದೆ.

13. ಪಿಡಬ್ಲ್ಯು–7, ಪ್ರತಿಕೂಲ ಸಾಕ್ಷಿಯಾಗಿದ್ದರು ಸಹ, ತನ್ನ ನಿರ್ವಿವಾದ ಸಾಕ್ಷ್ಯದಲ್ಲಿ, ಆರೋಪಿ ಸಂಖ್ಯೆ 1, 2 ಮತ್ತು 3 ರವರು ಸ್ಥಳದಲ್ಲಿ ಉಪಸ್ಥಿತರಿದ್ದ ಬಗ್ಗೆ ದಾಖಲಿಸಿದ್ದಾನೆ. ಘಟನೆಯ ತರುವಾಯ ಅವರು ಕೂಡಲೇ ಗೋಲಬಾವಿ ಗ್ರಾಮದ ಕಡೆಗೆ ಓಡಿಹೋದದ್ದು ಕಂಡು ಬಂದಿದೆ. ಇದಲ್ಲದೆ, ಮೃತ ವ್ಯಕ್ತಿಯ ದೇಹದ ಮೇಲೆ ಹಲವಾರು ಗಾಯಗಳು ಮತ್ತು ಮೆಣಸಿನ ಪುಡಿ ಇರುವುದನ್ನು ಅವನು ಗಮನಿಸಿದ್ದನು. ಲಕ್ಕಪ್ಪ ಸಿದ್ದಾಪುರ (ಪಿಡಬ್ಲ್ಯು–9) ಮತ್ತು ಅಶೋಕ್ ಮರೇಗುಡ್ಡಿ (ಪಿಡಬ್ಲ್ಯು–19) ನ್ಯಾಯಾಲಯದಲ್ಲಿ ಪ್ರತಿಕೂಲ ಸಾಕ್ಷಿಗಳಾಗಿ ಬದಲಾಗಿದ್ದರೂ ಸಹ, ಅವರು ಕೂಡಾ ಪೋಲಿಸರ ಎದುರು ಇದೇ ರೀತಿಯ ಹೇಳಿಕೆಗಳನ್ನು ನೀಡಿದ್ದರು ಎಂದು ಪ್ರಶ್ನಿಸಿದಾಗ, ಆ ಸತ್ಯಾಂಶವು ಇತರ ಸಾಕ್ಷಿದಾರರ ಮೂಲಕ, ಎಲ್ಲಾ ರೀತಿಯ ಸಂದರ್ಭಗಳಲ್ಲಿಯೂ ಸಹ ರುಜುವಾತಾಗಿದೆ ಎಂಬುದನ್ನು ಮಾತ್ರ ನಾವು ಇಲ್ಲಿ ದಾಖಲಿಸಬಹುದಾಗಿದೆ.

14. ಮೇಲೆ ಹೇಳಿದಂತೆ ಏಕೈಕ ಪ್ರತ್ಯಕ್ಷ ಸಾಕ್ಷಿಯಾದ ಪಿಡಬ್ಲ್ಯು–1ರ ಸಾಕ್ಷ್ಯವು ವಿಶ್ವಾಸಾರ್ಹವಾಗಿದ್ದು, ಅದು ಸತ್ಯವೇ ಮತ್ತು ನಂಬಲರ್ಹವೇ ಎಂಬ ಪ್ರಶ್ನೆಗಳನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

15. ಪ್ರತ್ಯಕ್ಷಸಾಕ್ಷಿಯೊಬ್ಬನ ಸಾಕ್ಷ್ಯವು ಎಲ್ಲಾ ಎಂಟು ಮಂದಿಯನ್ನು ಜೀವಾವಧಿ ಅಥವಾ ಆಜೀವ ಕಾರಾವಾಸ ಶಿಕ್ಷೆಗೆ ಒಳಪಡಿಸಲು ಸಾಕಾಗುತ್ತದೆಯೇ ಎಂಬ ಕಾನೂನಿನ ಅಂಶಕ್ಕೆ ಉತ್ತರ ನೀಡಲು, ನಾವು ನ್ಯಾಯಾಲಯದಲ್ಲಿ ಸಲ್ಲಿಸಲಾದ ನಿವೇದನೆಗಳನ್ನು ಗಮನಿಸಬೇಕಾಗಿದೆ.

16. ಸಾಕ್ಷಿಗಳ ಪ್ರಮಾಣಕ್ಕಿಂತ ಸಾಕ್ಷಿಗಳ ಗುಣಮಟ್ಟವು ಪ್ರಮುಖವಾಗಿದೆ ಎಂದು ಹೇಳಲಾಗಿದ್ದು, ಮೃತ ವ್ಯಕ್ತಿಯ ಸಹೋದರನಾಗಿರುವ ಪಿಡಬ್ಲ್ಯು–1 ಆಸಕ್ತ ಸಾಕ್ಷಿಯಾಗಿರುವುದರಿಂದ ಮತ್ತು ಈ ನ್ಯಾಯಾಲಯವು ಒತ್ತಿ ಹೇಳಿರುವಂತೆ ಅವನ ಹೇಳಿಕೆಯು "ಸ್ವಾಭಾವಿಕವಾಗಿ ವಿಶ್ವಾಸಾರ್ಹವಲ್ಲ" ಅಥವಾ "ಉತ್ತಮ ಗುಣಮಟ್ಟದಾಗಿಲ್ಲವಾದ್ದರಿಂದ" ಎರಡು ಸಂಭಾವ್ಯ ಆವೃತ್ತಿಗಳ ಹಾಜರಿಯಲ್ಲಿ ಆರೋಪಿಯನ್ನು ಬೆಂಬಲಿಸುವಂತ ಒಂದು ಆವೃತ್ತಿಯನ್ನು ಪರಿಗಣಿಬೇಕಾಗುತ್ತದೆ.

ಮಾನ್ಯ ಹಿರಿಯ ವಕೀಲರು ತಮ್ಮ ನಿವೇದನೆಗಳ ಸಮರ್ಥನೆಯಲ್ಲಿ, **ಮುರುದನಲ್ ಅಗಸ್ತಿ ವಿರುದ್ಧ ಕೇರಳ ರಾಜ್ಯ (1980) 4 ಎಸ್‌ಸಿಸಿ 425** ಪ್ರಕರಣದಲ್ಲಿ ಅದರಲ್ಲೂ

ವಿಶೇಷವಾಗಿ ಮ್ಯಾಜಿಸ್ಟ್ರೇಟ್ ಗೆ ಎಫ್ಐಆರ್ ಅನ್ನು ತಲುಪಿಸಲು ಎಕ್ಸೆಸ್ ಡೆಲಿವರಿ ಮೂಲಕ ಕಳುಹಿಸಿದರೂ, 29 ಗಂಟೆಗಳ ವಿಳಂಬವಾಗಿದೆ ಎಂಬುದನ್ನು ಮಾನ್ಯ ವಿಭಾಗೀಯ ನ್ಯಾಯಪೀಠವು "ಗಂಭೀರ ದೌರ್ಬಲ್ಯ"ವೆಂದು ಗಮನಿಸಿದ ಭಾಗವನ್ನು ಮತ್ತು **ಚೋಟ್ಕಾವು ವಿರುದ್ಧ ಉತ್ತರ ಪ್ರದೇಶ ರಾಜ್ಯ (2022) ಎಸ್ಸಿಸಿ ಆನ್ಲೈನ್ 1313** ಪ್ರಕರಣದಲ್ಲಿ ಇತ್ತೀಚೆಗೆ ಹೊರಡಿಸಿದ ತೀರ್ಪುಗಳನ್ನು ಅವಲಂಬಿಸಿದ್ದಾರೆ. ಮ್ಯಾಜಿಸ್ಟ್ರೇಟ್‌ಗೆ ಎಫ್ಐಆರ್ ತಲುಪಲು ವಿಳಂಬ ಆಗಿರುವ ನಿವೇದನೆಯನ್ನು ಪುಷ್ಠಿಕರಿಸಲು ಈ ಎರಡೂ ಪ್ರಕರಣಗಳನ್ನು ಉಲ್ಲೇಖಿಸಲಾಗಿದೆ.

17. ಈ ನ್ಯಾಯಾಲಯವು ಅನೇಕ ಸಂದರ್ಭಗಳಲ್ಲಿ ಒಂದೇ ಸ್ವರೂಪದ ಪ್ರಕರಣಗಳನ್ನು ಪರಿಗಣಿಸಿದ್ದು, ಮತ್ತು ಅಂತಹ ಪರಿಗಣನೆಯಿಂದ ಪ್ರಕರಣಗಳನ್ನು ನಿರ್ಧರಿಸುವಾಗ ವಿವಿಧ ತತ್ವಗಳು ಹೊರಹೊಮ್ಮಿವೆ. ಪ್ರಸ್ತುತ ದಾವೆಯಲ್ಲಿ ನಿರ್ಧರಿಸಬೇಕಾದ ಕೆಲವು ಪ್ರಮುಖ ತತ್ವಗಳು ಹೀಗಿವೆಃ

17.1 ಪ್ರತಿಕೂಲ ಸಾಕ್ಷಿಯ ಪುರಾವೆಃ

(ಎ) ಅಪರಾಧ ಕೃತ್ಯಕ್ಕೆ ಸಂಬಂಧಿಸಿದಂತೆ ಪ್ರತಿಕೂಲ ಸಾಕ್ಷಿಯೊಬ್ಬನ ಸಾಕ್ಷ್ಯದ ಪುಷ್ಟಿಕರಿಸಿದ ಭಾಗವು ಸ್ವೀಕಾರಾರ್ಹವಾಗಿರುತ್ತದೆ. ಕೇವಲ ಎಫ್ಐಆರ್‌ನಲ್ಲಿನ ಹೇಳಿಕೆಯು ವಿಷಯಾಂತರವಾಗುವುದರಿಂದ, ಸಾಕ್ಷಿಯ ಹೇಳಿಕೆಗಳನ್ನು ಸಂಪೂರ್ಣವಾಗಿ ವಿಶ್ವಾಸಾರ್ಹವಲ್ಲವೆಂದು ಹೇಳಲು ಸಾಧ್ಯವಿಲ್ಲ.

(ಬಿ) ಪ್ರತಿಕೂಲ ಸಾಕ್ಷಿಯೊಬ್ಬನ ಸಾಕ್ಷ್ಯವು ಅಪರಾಧಿ ಎಂದು ಸಾಬೀತುಪಡಿಸಲು ಆಧಾರವಾಗಬಹುದು.

(ಸಿ) ಹೇಳಿರುವಂತೆ ಪ್ರತ್ಯಕ್ಷದರ್ಶಿಗಳ ಸಾಕ್ಷ್ಯವನ್ನು ಪ್ರಶಂಸಿಸುವ ಸಾಮಾನ್ಯ ತತ್ವವೆಂದರೆ, ಒಂದು ಪ್ರಕರಣವು ಹೆಚ್ಚಿನ ಸಂಖ್ಯೆಯ ಅಪರಾಧಿಗಳನ್ನು ಒಳಗೊಂಡಿರುವಾಗ, ನ್ಯಾಯಾಲಯವು ದೂರದೃಷ್ಟಿಯಿಂದ, ಎಚ್ಚರಿಕೆಯ ಕ್ರಮವಾಗಿ ಕನಿಷ್ಠ ಇಬ್ಬರು ಹೆಚ್ಚುವರಿ ಸಾಕ್ಷಿಗಳಿಂದ ದೃಢೀಕರಿಣವನ್ನು ಬಯಸುವುದು ಅವಶ್ಯಕವಾಗುತ್ತದೆ ಆದರೆ ಅದು ಎಲ್ಲಾ ಸಂದಂರ್ಭಗಳಿಗೂ ಅನ್ವಯಿಸುವುದಿಲ್ಲ. ಅದು ಏನೇ ಆದರೂ ಸಾಕ್ಷಿಗಳ ಸಂಖ್ಯೆಗಿಂತ ಗುಣಮಟ್ಟವೇ ಇಲ್ಲಿ ತತ್ವವಾಗಿದೆ. [**ಮೃಣಾಲ್ ದಾಸ್ ವಿರುದ್ಧ ತ್ರಿಪುರಾ ರಾಜ್ಯ (2011) 9 ಎಸ್‌ಸಿಸಿ 479**]

<u>17.2 ಲೋಪ, ನ್ಯೂನತೆಗಳ ಪರಿಣಾಮ</u>

ಪುರಾವೆಗಳನ್ನು ಒಟ್ಟಾರೆಯಾಗಿ ಪರಿಶೀಲಿಸಿದಾಗ ಅದು ಸತ್ಯವನ್ನು ಪ್ರತಿಬಿಂಬಿಸಬೇಕು. ನ್ಯಾಯಾಲಯವು ಪ್ರಾಸಿಕ್ಯೂಷನ್ನಿನ ಪ್ರಕರಣದ ಅಡಿಪಾಯವನ್ನು ಅಲುಗಾಡಿಸದ ಲೋಪಗಳು ಮತ್ತು ನ್ಯೂನತೆಗಳಿಗೆ ಅನಗತ್ಯ ಪ್ರಾಮುಖ್ಯತೆಯನ್ನು ನೀಡಬಾರದು. [**ರೋಹ್ತಾಶ್ ಕುಮಾರ್ ವಿರುದ್ಧ ಹರಿಯಾಣ ರಾಜ್ಯ (2013) 14 ಎಸ್‌ಸಿಸಿ 434; ಭಗವಾನ್ ಜಗನ್ನಾಥ್ ಮರ್ಕಡ್ ವಿರುದ್ಧ ಮಹಾರಾಷ್ಟ್ರ ರಾಜ್ಯ (2016) 10**

ಎಸ್‌ಸಿಸಿ 537; ಮತ್ತು ಕರಣ್ ಸಿಂಗ್ ವಿರುದ್ಧ ಉತ್ತರ ಪ್ರದೇಶ ರಾಜ್ಯ (2022) 6 ಎಸ್‌ಸಿಸಿ 52]

17.3 ಏಕೈಕ ಸಾಕ್ಷಿಯನ್ನು ಅವಲಂಬಿಸುವುದು:

ಒಂದು ವೇಳೆ ಒಬ್ಬ ಸಾಕ್ಷಿಯು ಸಂಪೂರ್ಣವಾಗಿ ವಿಶ್ವಾಸಾರ್ಹವಾಗಿದ್ದರೆ, ಅದರ ಆಧಾರದ ಮೇಲೆ ನಿರ್ಣಿತವಾದ ಅಪರಾಧವನ್ನು ಯಾವುದೇ ರೀತಿಯಿಂದಲೂ ದುರ್ಬಲವೆಂದು ಹೇಳಲು ಸಾಧ್ಯವಿಲ್ಲ. **[ಕರುಣಾಕರನ್ ವಿರುದ್ಧ ತಮಿಳುನಾಡು ರಾಜ್ಯ (1976) 1 ಎಸ್‌ಸಿಸಿ 434 ಮತ್ತು ಸಾಧುರಾಮ್ ವಿರುದ್ಧ ರಾಜಸ್ಥಾನ, ರಾಜ್ಯ (2003) 11 ಎಸ್‌ಸಿಸಿ 231]**

17.4 ಹತ್ತಿರದ ಸಂಬಂಧಿಕರ ಸಾಕ್ಷ್ಯ:

ಒಂದು ಸಾಕ್ಷಿಯು ಹತ್ತಿರದ ಸಂಬಂಧಿಕನಾಗಿರುವುದು ಆತನ ಸಾಕ್ಷ್ಯವನ್ನು ತಿರಸ್ಕರಿಸಲು ಸಮಂಜಸವಾದ ಕಾರಣವಾಗುವುದಿಲ್ಲ. **"ಪಕ್ಷಪಾತ"** ಅಥವಾ **"ಆಸಕ್ತಿಯುಳ್ಳ"** ಸಾಕ್ಷಿಯನ್ನು ಸಹ ಯಾಂತ್ರಿಕ ರೀತಿಯಲ್ಲಿ ತಿರಸ್ಕರಿಸುವುದು ನ್ಯಾಯದ ವೈಫಲ್ಯಕ್ಕೆ ಕಾರಣವಾಗಬಹುದು. "ಒಂದರಲ್ಲಿ ಸುಳ್ಳಾದವನು, ಎಲ್ಲದರಲ್ಲಿಯೂ ಸುಳ್ಳು" ಎಂಬ ತತ್ವವು ಸಾಮಾನ್ಯವಾಗಿ ಅನ್ವಯಕವಲ್ಲ." **[ಭಗವಾನ್ ಜಗನ್ನಾಥ್ ಮರ್ಕಡ್ ವಿರುದ್ಧ ಮಹಾರಾಷ್ಟ್ರ ರಾಜ್ಯ (2016) 10 ಎಸ್‌ಸಿಸಿ 537]**

17.5 ಸಂಭಾವ್ಯತೆಗಳ ಪ್ರಾಧಾನ್ಯತೆ:

ದ್ವಂದ್ವ ದೃಷ್ಟಿಕೋನಗಳಿಂದ ಉದ್ಭವಿಸುವ ಅನುಮಾನದ ಲಾಭವನ್ನು ಒಬ್ಬ ವ್ಯಕ್ತಿ ಪಡೆಯುವಂತಾಗಲು, ಆರೋಪಿಯ ಪರವಾದ ಸಂಭಾವ್ಯ ದೃಷ್ಟಿಕೋನವು ಅವನ ವಿರುದ್ಧ ಸಾಧ್ಯವಾದಷ್ಟು ಸಮಂಜಸವಾಗಿ ಸಂಭವನೀಯವಾಗಿರಬೇಕು. **[ಗೋಪಾಲ್ ರೆಡ್ಡಿ ವಿರುದ್ಧ ಆಂಧ್ರಪ್ರದೇಶ ರಾಜ್ಯ (1979) 1 ಎಸ್‌ಸಿಸಿ 355]**

17.6 ಎಫ್‌ಐಆರ್ ಕಳುಹಿಸುವಲ್ಲಿ ವಿಳಂಬಃ

ಗಂಭೀರ ಪೂರ್ವಾಗ್ರಹದ ಹೊರತು, ಕೇವಲ ಮ್ಯಾಜಿಸ್ಟ್ರೇಟ್‌ಗೆ ಎಫ್.ಐ.ಆರ್. ಕಳುಸುವಲ್ಲಿ ಆದ ವಿಳಂಬವು ಅಭಿಯೋಜನೆ ಪ್ರಕರಣದ ಮೇಲೆ ಸ್ವತಃ ಯಾವ ನಕಾರಾತ್ಮಕ ಪರಿಣಾಮವನ್ನು ಬೀರುವುದಿಲ್ಲ. **[ರಾಜಸ್ಥಾನ ರಾಜ್ಯ ವಿರುದ್ಧ ದೌಡ್ ಖಾನ್ (2016) 2 ಎಸ್‌ಸಿಸಿ 607]**

ಎಫ್‌ಐಆರ್ ಅನ್ನು ಮ್ಯಾಜಿಸ್ಟ್ರೇಟ್‌ಗೆ ರವಾನಿಸುವ ಸಮಯ ಅಥವಾ ಮ್ಯಾಜಿಸ್ಟ್ರೇಟ್‌ರಿಂದ ಸ್ವೀಕೃತವಾದ ಸಮಯವು ಎಫ್‌ಐಆರ್‌ನ ಪೂರ್ವ–ದಿನಾಂಕ ಅಥವಾ ಪೂರ್ವ–ಸಮಯದ ವಿರುದ್ಧ ಇರುವ ಬಾಹ್ಯ ನಿಯಂತ್ರಣಗಳಲ್ಲಿ ಒಂದಾಗಿರುತ್ತದೆ. ಎಫ್‌ಐಆರ್‌ನ ಒಂದು ಪ್ರತಿಯನ್ನು ತಕ್ಷಣ ರವಾನಿಸುವುದು ಎಫ್‌ಐಆರ್‌ನಲ್ಲಿ ಯಾವುದೇ ಕೈವಾಡ ಅಥವಾ ಪ್ರಕ್ಷೇಪಣೆ ಇಲ್ಲವೆಂಬುದನ್ನು

ಖಚಿತಪಡಿಸುತ್ತದೆ. [**ಮೆಹ್ರಾಜ್ ವಿರುದ್ಧ ಉತ್ತರ ಪ್ರದೇಶ ರಾಜ್ಯ (1994) 5 ಎಸ್‌ಸಿಸಿ 188 ಮತ್ತು ಓಂಬೀರ್ ಸಿಂಗ್ ವಿರುದ್ಧ ಉತ್ತರ ಪ್ರದೇಶ ರಾಜ್ಯ (2020) 6 ಎಸ್‌ಸಿಸಿ 378.**]

17.7 'ಕೊನೆಯದಾಗಿ ನೋಡಿದ' ಎಂಬ ಸಿದ್ಧಾಂತಃ

ಸ್ವತಃ, 'ಕೊನೆಯದಾಗಿ ನೋಡಿದ' ಎಂಬ ಸಿದ್ಧಾಂತವು ಅಪರಾಧ ಶಿಕ್ಷೆಗೆ ಒಂದು ದುರ್ಬಲ ಆಧಾರವೆಂದು ಪರಿಗಣಿಸಲ್ಪಟ್ಟಿದೆ. ಆದಾಗ್ಯೂ, ಇದನ್ನು ಬೇರೆ ಅಂಶಗಳೊಂದಿಗೆ ಸಂಯೋಜಿಸಿದಾಗ ಅಂದರೆ ಮೃತ ವ್ಯಕ್ತಿಯನ್ನು ಕೊನೆಯ ಬಾರಿಗೆ ಆರೋಪಿಯೊಂದಿಗೆ ನೋಡಿದಕ್ಕೂ, ಮೃತ ವ್ಯಕ್ತಿಯ ದೇಹವನ್ನು ಹುಡುಕಿದ ಸಮಯಕ್ಕೂ ಸಾಮೀಪ್ಯತೆ ಇದ್ದಲ್ಲಿ ಆರೋಪಿಯು ಸಾಕ್ಷ್ಯ ಅಧಿನಿಯಮ 1872, ಸೆಕ್ಷನ್ 106ರಡಿ ಸ್ಪಷ್ಟೀಕರಣ ನೀಡಬೇಕಾಗುವುದು. ಅವನು ಹಾಗೆ ಮಾಡದಿದ್ದಲ್ಲಿ ಅಥವಾ 'ಸುಳ್ಳು ಸ್ಪಷ್ಟೀಕರಣ' ಎಂದು ಕರೆಯಬಹುದಾದ ವಿವರಣೆಯನ್ನು ಒದಗಿಸಿದ್ದಲ್ಲಿ ಅಥವಾ ಯಾವುದೇ ಇತರ ಊಹಾಪೋಹಗಳ ಸಾಧ್ಯತೆಯನ್ನು ಮುಚ್ಚಿ ಆರೋಪಿಯನ್ನು ಶಿಕ್ಷೆಗೆ ಒಳಪಡಿಸುವ ಸುರಕ್ಷಿತ ಮನವಿಯಂತಹ, ಒಂದು ಉದ್ದೇಶವು ಸ್ಥಾಪಿತವಾದರೆ ಅದರ ಆಧಾರದ ಮೇಲೆ ಶಿಕ್ಷೆ ವಿಧಿಸಬಹುದು. [**ಸತ್ವಾಲ್ ಸಿಂಗ್ ವಿರುದ್ಧ ಹರಿಯಾಣ ರಾಜ್ಯ (2018) 6 ಎಸ್‌ಸಿಸಿ 610 ಮತ್ತು ರಾಮ್ ಗೋಪಾಲ್ ವಿರುದ್ಧ ಮಧ್ಯಪ್ರದೇಶ ರಾಜ್ಯ (2023) ಎಸ್ಸಿಸಿ ಆನ್‌ಲೈನ್ 158**]

17.8 ಹಲವಾರು ಆರೋಪಿಗಳನ್ನು ಒಳಗೊಂಡ ಪ್ರಕರಣಗಳು

ಭಾರತೀಯ ದಂಡ ಸಂಹಿತೆ 1860ರ ಸೆಕ್ಷನ್ 149ರ ಅನ್ವಯಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಒಬ್ಬರು (ಬಿ. ಆರ್. ಗವಾಯಿ) ಸದಸ್ಯರಾಗಿದ್ದ ತ್ರಿಸದಸ್ಯ ನ್ಯಾಯಾಧೀಶರ ಪೀಠವು ಈ ಕೆಳಗಿನಂತೆ ಗಮನಿಸಿತುಃ

> 30. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 149, ಒಂದು ಕಾನೂನುಬಾಹಿರ ಗುಂಪಿನ ಸದಸ್ಯರು ಆ ಗುಂಪಿನ ಏಕೋದ್ದೇಶ ಸಾಧನೆಗಾಗಿ ಮಾಡಿದ ಕೃತ್ಯಗಳಿಗೆ ಅಥವಾ ಅಂತಹ ಕಾನೂನುಬಾಹಿರ ಗುಂಪಿನ ಸದಸ್ಯರು ಆ ಉದ್ದೇಶದ ಸಾಧನೆಗೆ ಮಾಡಲಾಗುವುದೆಂದು ತಿಳಿದಿರುವ ಅಪರಾಧಗಳಿಗೆ ಪರೋಕ್ಷ ಹೊಣೆಗಾರಿಕೆಯನ್ನು ಘೋಷಿಸುತ್ತದೆ. ಒಂದು ವೇಳೆ ಅಪರಾಧವನ್ನು ಮಾಡುವ ಸಾಮಾನ್ಯ ಉದ್ದೇಶದಿಂದ ಕಾನೂನುಬಾಹಿರ ಗುಂಪು ರಚಿಸಲ್ಪಟ್ಟರೆ, ಮತ್ತು ಆ ಅಪರಾಧವನ್ನು ಕಾನೂನುಬಾಹಿರ ಗುಂಪಿನ ಯಾವುದೇ ಸದಸ್ಯರು ಆ ಉದ್ದೇಶದ ಸಾಧನೆಯಲ್ಲಿ ತೊಡಗಿರುವಾಗ, ಸಭೆಯ ಎಲ್ಲಾ ಸದಸ್ಯರು ಆ ಅಪರಾಧವನ್ನು ಎಸಗದೆ, ಕೇವಲ ಒಂದು ಅಥವಾ ಅದಕ್ಕಿಂತ ಹೆಚ್ಚು ಸದಸ್ಯರು ಆ ಅಪರಾಧದಲ್ಲಿ ಭಾಗಿಯಾದರೂ, ಅಂತಹ ಕಾನೂನು ಬಾಹಿರ ಗುಂಪಿನ ಎಲ್ಲಾ ಸದಸ್ಯರು ಪರೋಕ್ಷವಾಗಿ ಹೊಣೆಗಾರರಾಗುತ್ತಾರೆ. ಮತ್ತೊಮ್ಮೆ, ಕಾನೂನು ಬಾಹಿರ ಸಭೆಯ ಸದಸ್ಯನು ಒಂದು ವೇಳೆ ಅಪರಾಧವನ್ನು ಎಸಗಿದರೆ ಮತ್ತು ಆ ಅಪರಾಧವನ್ನು, ಸಾಮಾನ್ಯ ಉದ್ದೇಶದ ಸಾಧನೆಯಲ್ಲಿ ಎಸಗಬಹುದೆಂದು ಕಾನೂನುಬಾಹಿರ ಗುಂಪಿನ ಸದಸ್ಯರು ಅರಿತವರಾಗಿದ್ದಲ್ಲಿ, ಆ ಜ್ಞಾನವನ್ನು ಹೊಂದಿದ ಪ್ರತಿಯೊಬ್ಬ ಸದಸ್ಯರೂ ಆ ಅಪರಾಧದ ಅಪರಾಧಿಗಳಾಗುತ್ತಾರೆ. [**ಹರಿ ವಿರುದ್ಧ ಉತ್ತರ ಪ್ರದೇಶ ರಾಜ್ಯ 2021 ಎಸ್‌ಸಿಸಿ ಆನ್‌ಲೈನ್ ಎಸ್‌ಸಿ 1131; ಶಂಭು ನಾಥ್ ಸಿಂಗ್ ವಿರುದ್ಧ ಬಿಹಾರ ರಾಜ್ಯ, ಎಐಆರ್ 1960 ಎಸ್‌ಸಿ 725**]

ನೇರ ಕೃತ್ಯ ಮತ್ತು ಸಕ್ರಿಯ ಭಾಗವಹಿಸುವಿಕೆಯು ಅಪರಾಧವನ್ನು ಎಸಗಿದ ವ್ಯಕ್ತಿಯ ಸಾಮಾನ್ಯ ಉದ್ದೇಶವನ್ನು ಸೂಚಿಸಬಹುದು, ಒಬ್ಬ ವ್ಯಕ್ತಿಯು ಕಾನೂನುಬಾಹಿರ ಗುಂಪಿನಲ್ಲಿ ಭಾಗವಹಿಸುವಿಕೆ ಸೆಕ್ಷನ್ 149 ರ ಅಡಿಯಲ್ಲಿ ಪರೋಕ್ಷವಾಗಿ ಕ್ರಿಮಿನಲ್ ಹೊಣೆಗಾರಿಕೆಯನ್ನು ಬಲಪಡಿಸಬಹುದು. [**ಲಾಲ್‌ಜಿ ವಿರುದ್ಧ ಉತ್ತರ ಪ್ರದೇಶ ರಾಜ್ಯ (1989) 1 ಎಸ್‌ಸಿಸಿ 437**]

ಒಂದು ಪ್ರಕರಣವು ಹೆಚ್ಚಿನ ಸಂಖ್ಯೆಯ ಹಲ್ಲೇಕಾರರನ್ನು ಒಳಗೊಂಡಿರುವಾಗ, ಅಂತಹ ಪ್ರತಿಯೊಬ್ಬ ವ್ಯಕ್ತಿಯೂ ನಿರ್ವಹಿಸಿದ ಪಾತ್ರವನ್ನು ಸಾಕ್ಷಿಯಿಂದ ವಿವರಿಸಲು ಸಾಧ್ಯವಾಗದಿರಬಹುದು. ಪ್ರಾಸಿಕ್ಯೂಷನ್‌ಗೆ ಪ್ರತಿಯೊಬ್ಬ ಸದಸ್ಯರ ಪಾಲ್ಗೊಳ್ಳುವಿಕೆಯನ್ನು ವಿಶೇಷವಾಗಿ ಯಾವ ಅಥವಾ ಎಂಥ ಕಾರ್ಯ ಎಂಬುದನ್ನು ಸಾಬೀತುಪಡಿಸುವ ಅಗತ್ಯವಿರುವುದಿಲ್ಲ, [**ಮಸಲ್ತಿ ವಿರುದ್ಧ ಉತ್ತರ ಪ್ರದೇಶ ರಾಜ್ಯ ಎಐಆರ್ 1965 ಎಸ್‌ಸಿ 202**]

<u>17.9 ಅಪೀಲು ನ್ಯಾಯಾಲಯದ ಅಧಿಕಾರ:–</u>

ಎ) ಅಪೀಲು ನ್ಯಾಯಾಲಯವು ಪ್ರಕರಣವೊಂದರ ಎಲ್ಲಾ ಹಂತಗಳಲ್ಲಿಯೂ ಮುಂದುವರಿಯುವ ನಿರ್ದೋಷಿತ್ವದ ಪೂರ್ವಭಾವನೆಯ ವಾಹಕವಾಗುವದರೊಂದಿಗೆ ಅಪರಾಧಿಯೆಂದು ನಿರ್ಣಯಿಸುವ ಆದೇಶದಲ್ಲಿರುವಂತೆ ಖುಲಾಸೆಯ ಆದೇಶದಲ್ಲಿನ ಸಾಕ್ಷ್ಯಾಧಾರಗಳ ಮೌಲ್ಯಮಾಪನದ ವ್ಯಾಪಕ ಅಧಿಕಾರಗಳನ್ನು ಹೊಂದಿದೆ, ಅಂತಹ

ನ್ಯಾಯಾಲಯವು ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪಿಗೆ ಸೂಕ್ತ ಪ್ರಾಮುಖ್ಯತೆಯನ್ನು ನೀಡಬೇಕು. **[ಆಟ್ಲಿ ವಿರುದ್ಧ ಉತ್ತರ ಪ್ರದೇಶ ರಾಜ್ಯ ಎ.ಐ.ಆರ್. 1955 ಎಸ್. ಸಿ. 807]**

(ಬಿ) **ಗುರುದತ್ ಪಾಠಕ್ ವಿರುದ್ಧ ಉತ್ತರ ಪ್ರದೇಶ ರಾಜ್ಯ [(2021) 6 ಎಸ್‌ಸಿಸಿ 116] ರಲ್ಲಿ ಗೀತಾ ದೇವಿ ವಿರುದ್ಧ ಉತ್ತರ ಪ್ರದೇಶ ರಾಜ್ಯ [2022 ಎಸ್‌ಸಿಸಿ ಆನ್‌ಲೈನ್ 57]** ಪ್ರಕರಣದಲ್ಲಿ ನೀಡಿದ ತೀರ್ಪನ್ನು ಉಲ್ಲೇಖಿಸಿ, ಈ ನ್ಯಾಯಾಲಯವು ಈ ಅಂಶದ ಮೇಲಿನ ಕಾನೂನನ್ನು ಪುರಸ್ಕರಿಸಿತು ಮತ್ತು ನಂತರ ಉಚ್ಚ ನ್ಯಾಯಾಲಯವು ಮೊದಲ ಮೇಲ್ಮನವಿ ನ್ಯಾಯಾಲಯವಾಗಿ, ದಾಖಲೆಯಲ್ಲಿರುವ ಸಾಕ್ಷ್ಯದ ಬಗ್ಗೆ ಚರ್ಚಿಸಬೇಕು/ಮರು–ಮೌಲ್ಯಮಾಪನ ಮಾಡಬೇಕು ಎಂದು ಅಭಿಪ್ರಾಯಪಟ್ಟಿತು. ಹಾಗೆ ಮಾಡಲು ವಿಫಲವಾಗುವುದು ವಿಷಯವನ್ನು ಪುನರ್ ವಿಚಾರಣೆಗಾಗಿ ಒಪ್ಪಿಸಲು ಇರುವ ಒಂದು ಉತ್ತಮ ಆಧಾರವಾಗಿದೆ.

<u>17.10 ಅನುಚ್ಛೇದ 136ರ ಅಡಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಅಧಿಕಾರಃ</u>

ವಿಶೇಷ ಸನ್ನಿವೇಶಗಳ ಅನುಪಸ್ಥಿತಿಯಲ್ಲಿ ಅಥವಾ ಉಚ್ಚ ನ್ಯಾಯಾಲಯವು ಕಾನೂನನ್ನು ತಪ್ಪಾಗಿ ತಿಳಿದುಕೊಂಡಿದ್ದರಿಂದ ಎಸಗಿದ ಗಂಭೀರ ಪ್ರಮಾದಗಳ ಉಪಸ್ಥಿತಿಯಲ್ಲಿ, ಈ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯಗಳ ಏಕಕಾಲಿಕ

ನಿರ್ಣಯದ ವಾಸ್ತವಾಂಶಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ [**ಶರದ್ ಬಿರ್ಧಿಚಂದ್ ಸರ್ದಾ ವಿರುದ್ಧ ಮಹಾರಾಷ್ಟ್ರ ರಾಜ್ಯ (1984) 4 ಎಸ್‌ಸಿಸಿ 116**]

ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿನ ಮಿತಿಗಳು ಸ್ವಯಂ ವಿಧಿಸಿದ ಮಿತಿಗಳಾಗಿದ್ದು, ತೀರ್ಪು ಅಥವಾ ಸಾಮಾನ್ಯ ಕ್ರಮದಲ್ಲಿ ವಿಶೇಷ ಅನುಮತಿಯ ಅರ್ಜಿಗಳ ವಸ್ತು ವಿಷಯವು ವ್ಯತಿರಿಕ್ತವಾಗಿರುವಾಗ ಸ್ಪಷ್ಟ ದೋಷದ ಅನುಪಸ್ಥಿತಿಯಲ್ಲಿ ಸಾಕ್ಷ್ಯಾಧಾರದ ಮೌಲ್ಯಮಾಪನಗಳನ್ನು ಮಾಡಬಾರದು. [**ಕಲಾಮಣಿ ಟೆಕ್ಸ್ ವಿರುದ್ಧ ಪಿ. ಬಾಲಸುಬ್ರಮಣಿಯನ್ (2021) 5 ಎಸ್‌ಸಿಸಿ 283**]

18. ಅಪೀಲುದಾರರ ಪರ ಮಾನ್ಯ ವಕೀಲರು, ಆರೋಪಿಗಳ ಸಂಖ್ಯೆಗೆ ಸಂಬಂಧಿಸಿದಂತೆ ಪರೋಕ್ಷವಾಗಿರುವ ಪಿಡಬ್ಲ್ಯೂ–1 ರ ಹೇಳಿಕೆಗಳು ಅಪರಾಧವನ್ನು ನಿರ್ಣಯಿಸುವಲ್ಲಿ ಯಾವುದೇ ರೀತಿಯಾದ ಪ್ರಬಲ ಕಾರಣಗಳನ್ನು ರೂಪಿಸುವುದಿಲ್ಲವಾದ್ದರಿಂದ ಆರೋಪಿಯನ್ನು ಶಿಕ್ಷಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳು ತಪ್ಪನ್ನೆಸಗಿರುತ್ತವೆ ಎಂಬ ತೀರ್ಮಾನವನ್ನು ಎತ್ತಿಹಿಡಿಯಬೇಕೆಂದು ಈ ನ್ಯಾಯಾಲಯವನ್ನು ಕೋರಿದ್ದಾರೆ.

19. ನ್ಯಾಯಾಲಯದ ಮುಂದೆ ಸಲ್ಲಿಸಿರುವ ನಿವೇದನೆಗಳು, ಮುದ್ದೆ ಮಾಲುಗಳು ಮತ್ತು ಪ್ರಕರಣದ ದಾಖಲೆಯನ್ನು ರೂಪಿಸುವ ಪ್ರದರ್ಶಿಕೆಗಳನ್ನು ಪರಿಗಣಿಸಿದ ನಂತರ, ದೂರುದಾರ ಪಿಡಬ್ಲ್ಯೂ–1 ಇವನ ಏಕೈಕ ಸಾಕ್ಷ್ಯದ ಆಧಾರದ ಮೇಲೆ ಮತ್ತು

ಪಿಡಬ್ಲ್ಯೂ–7 (ಪ್ರತಿಕೂಲ ಸಾಕ್ಷಿ)ಯ ಪೂರಕ ಸಾಕ್ಷ್ಯದ ಆಧಾರದ ಮೇಲೆ ಮಾನ್ಯ ಅಧಿವಿಚಾರಣಾ ನ್ಯಾಯಾಲಯವು ಪ್ರಾಸಿಕ್ಯೂಷನ್ ತನ್ನ ಪ್ರಕರಣವನ್ನು ನ್ಯಾಯಬದ್ಧವಾದ ಯಾವುದೇ ಅನುಮಾನಕ್ಕೂ ಆಸ್ಪದ ಕೊಡದಂತೆ ಸಾಬೀತುಪಡಿಸಿದೆ ಎಂಬುದನ್ನು ಗಮನಿಸಿದೆ. ಇದನ್ನು ಈ ಕೆಳಗಿನಂತೆ ಗಮನಿಸಲಾಗಿದೆ.

> ಮೇಲೆ ಉಲ್ಲೇಖಿಸಲಾದ ದೂರುದಾರ ಮತ್ತು ಇತರ ಸಾಕ್ಷಿಗಳ ನಂಬಲರ್ಹವಾದ ಸಾಕ್ಷ್ಯವನ್ನು ಸಲ್ಲಿಸುವ ಮೂಲಕ ಪ್ರಾಸಿಕ್ಯೂಷನ್ ಆರೋಪಿಗಳ ವಿರುದ್ಧ ತನ್ನ ಪ್ರಕರಣವನ್ನು ಸಾಬೀತುಪಡಿಸಿದೆ ಮತ್ತು ಈ ರೀತಿಯಾಗಿ ಆರೋಪಿಗಳು ಕಾನೂನುಬಾಹಿರ ಗುಂಪನ್ನು ರಚಿಸಿದ, ಮಾರಕ ಶಸ್ತ್ರಾಸ್ತ್ರಗಳನ್ನು ಜೊತೆಗೆ ಗಲಭೆ ನಡೆಸಿದ ಅಪರಾಧಗಳಲ್ಲಿ ಅಪರಾಧಿಗಳು ಎಂದು ಸಾಬೀತಾಗಿದೆ ಮತ್ತು ಅವರು ಮೃತ ಸತ್ಯಪ್ಪನನ್ನು ಅವಾಚ್ಯ ಭಾಷೆಯಲ್ಲಿ ನಿಂದಿಸಿದ್ದಾರೆ ಮತ್ತು ನಂತರ ಅವರು 13.08.2004ರಂದು ಮಧ್ಯಾಹ್ನ 3.00 ಗಂಟೆಗೆ ತೆರೆದಾಳದಿಂದ ಕಲ್ತಿಪ್ಪಿಗೆ ಸಾಗುವ ಸಾರ್ವಜನಿಕ ರಸ್ತೆಯಲ್ಲಿ ಮೃತ ಸತ್ಯಪ್ಪನನ್ನು ಕೊಲೆ ಮಾಡಿದ್ದಾರೆ, ಹೀಗಾಗಿ ಅಂತಹವರಿಗೆ ತಕ್ಕ ಶಿಕ್ಷೆ ವಿಧಿಸಬೇಕು.""

ದೂರಿನ ಕರಡು ಸಿದ್ಧಪಡಿಸುವಲ್ಲಿ ಹನಮಂತ್ ಭೀಮಪ್ಪ ರೆಡ್ಡಿ (ಪಿಡಬ್ಲ್ಯು–24) ಇವನ ಸಹಕಾರವು ಅದರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವುದಿಲ್ಲ ಎಂದು ದಾಖಲಾಗಿರುವ ಸಾಕ್ಷ್ಯಗಳ ಸಂಪೂರ್ಣ ಮೌಲ್ಯಮಾಪನ ಮಾಡುವಾಗ ಹಾಗೂ ಪಿಡಬ್ಲ್ಯೂ–28 ರವರಿಗೆ ಎಫ್ಐಆರ್ ಅನ್ನು ನೀಡುವಾಗ ಕೆಲಸದ ಸಮಯವು ಸಂಜೆ 4.45 ಆಗಿದ್ದರೂ ಬೆಳಗ್ಗೆ 8 ರಿಂದ ಸಂಜೆ 8 ಎಂದು ವ್ಯತ್ಯಾಸ ತೋರಿಸಿದ್ದರೂ ಸಹ

ಅದು ಮುಖ್ಯ ವಿಚಾರಣೆಯಲ್ಲಿ ಹೇಳಿಕೆಗಳನ್ನು ತಳ್ಳಿಹಾಕುವುದಿಲ್ಲ ಎಂಬ ನಿಲುವನ್ನು ಉಚ್ಚ ನ್ಯಾಯಾಲಯವು ಸಮಂಜಸವಾದ ಕಾರಣಗಳನ್ನು ಸಮರ್ಥಿಸುವಾಗ ದೃಢವಾಗಿ ವ್ಯಕ್ತಪಡಿಸಿದೆ.

20. ಮ್ಯಾಜಿಸ್ಟ್ರೇಟ್‌ಗೆ ಎಫ್.ಐ.ಆರ್. ತಲುಪುವಲ್ಲಿ ಆದ ವಿಳಂಬಕ್ಕೆ ಸಂಬಂಧಿಸಿದಂತೆ, ಪ್ರದರ್ಶಿಸಲಾದ ಪೂರ್ವಾಗ್ರಹದ ಅನುಪಸ್ಥಿತಿಯಲ್ಲಿ ಉಂಟಾಗುವ ಪ್ರತಿಯೊಂದು ವಿಳಂಬವು ಯಾವುದೇ ಪ್ರಕರಣಕ್ಕೆ ಮಾರಣಾಂತಿಕವಾಗಿರುವುದಿಲ್ಲ ಎಂಬುದು ಕಾನೂನಿನ ಸ್ಥಿರವಾದ ನಿಲುವಾಗಿದೆ (**ಭಜನ್ ಸಿಂಗ್ @ ಹರ್ಭಜನ್ ಸಿಂಗ್ ವಿ. ಹರಿಯಾಣ ರಾಜ್ಯ (2011) 7 ಎಸ್. ಸಿ. ಸಿ. 421) ಚೋಟ್ಕಾವ್** (ಮೇಲೆ ಹೇಳಿದ) ಪ್ರಕರಣದಲ್ಲಿ ನ್ಯಾಯಾಲಯವು **"ತನಿಖೆಯ ಮೇಲೆ ಅಂತಹ ವಿಳಂಬದ ಪರಿಣಾಮವನ್ನು ಮತ್ತು ತನಿಖೆಯ ವಿಶ್ವಾಸಾರ್ಹತೆಯನ್ನು ನೋಡುವುದು ನ್ಯಾಯಾಲಯದ ಕರ್ತವ್ಯ"**ವಾಗಿದೆ ಎಂಬುದನ್ನು ಒತ್ತಿ ಹೇಳಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ ಈ ನ್ಯಾಯಾಲಯದ ಎದುರು ಈ ತತ್ವದ ಮೇಲೆ ಅವಲಂಬಿತವಾಗಿದ್ದರೂ, ಆರೋಪಿಗಳ ವಿರುದ್ಧ ಪೂರ್ವಗ್ರಹವನ್ನು ಹೊಂದಿರುವುದನ್ನು ತೋರಿಸಲು ಯಾವುದೇ ನಿವೇದನೆಗಳನ್ನು ಪ್ರಸ್ತುತಪಡಿಸಿಲ್ಲ. ತೃಪ್ತಿದಾಯಕವಾಗದ ಹೇಳಿಕೆಗಳು ನ್ಯಾಯಾಲಯದ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ಸಂಬಂಧಿತ ಮ್ಯಾಜಿಸ್ಟ್ರೇಟ್‌ರಿಂದ ಎಫ್‌ಐಆರ್ ಅನ್ನು ಸ್ವೀಕರಿಸುವಲ್ಲಿ ವಿಳಂಬವಾದರೂ ಸಹ ಅದು ಪ್ರಾಸಿಕ್ಯೂಷನ್ ಪ್ರಕರಣವನ್ನು ನಂಬದಿರಲು

ಕಾರಣವಾಗುವುದಿಲ್ಲ. ಇದು ನಿಬಂಧನೆಗಳನ್ನು ಪಾಲಿಸದಿರುವ ಪ್ರಕರಣವಲ್ಲ, ಹಾಗೆಯೇ – ವಿಳಂಬವು ಯಾವುದೇ ಅನುಮಾನವನ್ನು ಹುಟ್ಟು ಹಾಕುವಂತದ್ದಲ್ಲ. ದಿನಾಂಕ 13.08.2004ರ ಸಂಜೆ 4.45ಕ್ಕೆ ದಾಖಲಾದ ಎಫ್ಐಆರ್ ಅನ್ನು ತಕ್ಷಣವೇ ಕಳುಹಿಸಲಾಯಿತು ಹಾಗೂ ಬೆಳಗ್ಗೆ 1.15ಕ್ಕೆ ಸ್ವೀಕರಿಸಲಾಯಿತು.

21. ಕೇವಲ ಆರೋಪಿ ಸಂಖ್ಯೆ 2 ಮತ್ತು 4ನೇಯವರನ್ನು ಹೊರತುಪಡಿಸಿ ಬೇರೆ ಯಾರಿಂದಲೂ ಏನನ್ನು ವಶಪಡಿಸಿಕೊಳ್ಳಲಾಗಿಲ್ಲ ಎನ್ನುವುದು ಇತರರು ಗುನ್ನೆ ಸ್ಥಳದಲ್ಲಿ ಉಪಸ್ಥಿತರಿರಲಿಲ್ಲ ಎಂದಾಗುವುದಿಲ್ಲ. ಹಲವಾರು ಸಾಕ್ಷಿಗಳು ಪ್ರತಿಕೂಲವಾಗಿ ಬದಲಾದ ಕಾರಣ, ಪಿಡಬ್ಲ್ಯು–1ರ ಸಾಕ್ಷ್ಯವನ್ನು ತಿರಸ್ಕರಿಸಲು ತನ್ನದೇ ಆದ ಕಾರಣವನ್ನು ನೀಡುವುದಿಲ್ಲ ಮತ್ತು ಪಿಡಬ್ಲ್ಯು–1 ಮೃತನ ಖಾಸಾ ಸೋದರನಾಗಿದ್ದು ಮತ್ತು ಹಾಗಾಗಿ, ಆಸಕ್ತ ಹಾಗೂ ಆಕಸ್ಮಿಕ ಸಾಕ್ಷಿದಾರನಾಗಿದ್ದಾನೆ ಎಂಬುದು ಅಸಮರ್ಥನೀಯ ನಿವೇದನೆಗಳಾಗಿವೆ. ಈ ಹಿನ್ನೆಲೆಯಲ್ಲಿ ನಾವು ಮೇಲ್ಮನವಿದಾರರ ಪರವಾಗಿ ಹಾಜರಿರುವ ಹಿರಿಯ ವಕೀಲರಾದ ಶ್ರೀ ನಾಗಮುತ್ತು ಎಸ್, ಮತ್ತು ಡಾ. ಕೆ. ರಾಧಾಕೃಷ್ಣನ್ ರವರು ಸಲ್ಲಿಸಿದ ನಿವೇದನೆಗಳಲ್ಲಿ, ಏಕೈಕ ಸಾಕ್ಷ್ಯದ ಆಧಾರದ ಮೇಲೆ ಎಂಟು ವ್ಯಕ್ತಿಗಳಿಗೆ ಶಿಕ್ಷೆಯನ್ನು ವಿಧಿಸಿರುವುದು ಸಮರ್ಥನೀಯವಲ್ಲ ಎಂದು ಹೇಳಿರುವುದನ್ನು, ಅದರಲ್ಲೂ ವಿಶೇಷವಾಗಿ ಪ್ರತಿಯೊಬ್ಬ ಆರೋಪಿಯೂ ನಿರ್ವಹಿಸಿದ ಪಾತ್ರದ ಬಗ್ಗೆ ಸಾಕ್ಷಿಗೆ ಯಾವುದೇ ಅಸ್ಪಷ್ಟತೆ ಇಲ್ಲದಿರುವಾಗ, ನಾವು ಒಪ್ಪುವುದಿಲ್ಲ.

22. ದೂರುಗಳ ಕರಡು ಪ್ರತಿ ತಯಾರಿಕೆಯಲ್ಲಿ ಪಿಡಬ್ಲ್ಯು–24 ನಿರ್ವಹಿಸಿದ ಪಾತ್ರವನ್ನು ಕೇವಲ ಅವರು ವಕೀಲರಾಗಿದ್ದರು ಹಾಗಾಗಿ ವಿವರವಾಗಿ ಗಮನ ಹರಿಸಿದರು ಎನ್ನುವ ಕಾರಣಕ್ಕಾಗಿ ನಕಾರಾತ್ಮಕವಾಗಿ ಪರಿಗಣಿಸಲಾಗುವುದಿಲ್ಲ. ಪಿಡಬ್ಲ್ಯು–1 ಅವನು ತಮ್ಮ ದೂರಿನಲ್ಲಿ ತಮಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ಹೇಳಿದ್ದಾರೆ. ದೂರನ್ನು ರಚಿಸಲು ಪಿಡಬ್ಲ್ಯು–24ರವರಿಗೆ ಕರೆ ಮಾಡಿದವರ ಪಾತ್ರವನ್ನು ಯಾರಿಗೆ ನೀಡಬಹುದು ಅಥವಾ ಪಿಡಬ್ಲ್ಯು–1 ರ ಸೂಚನೆಯ ಮೇರೆಗೆ ಅಥವಾ ಪೊಲೀಸರು ತಯಾರಿಸಿದ ಟಿಪ್ಪಣಿಗಳ ಆಧಾರದ ಮೇರೆಗೆ ಕರಡು ರಚನೆಯಲ್ಲಿ ಉಂಟಾದ ವ್ಯತ್ಯಾಸವಾಗಲಿ ಇಲ್ಲಿ ಸ್ಪಷ್ಟವಾಗಿಲ್ಲ. ಮಾನ್ಯ ಸೆಷನ್ಸ್ ನ್ಯಾಯಾಧೀಶರ ದೃಷ್ಟಿಕೋನವು ಸಂಪೂರ್ಣವಾಗಿ ತಪ್ಪಾಗಿದೆ ಅಥವಾ ಕಾನೂನು ಬಾಹಿರವಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ವಿಶೇಷ ಅನುಮತಿ ಅರ್ಜಿಗಳ ಮೂಲಕ ಇಲ್ಲಿ ಸಲ್ಲಿಸಲಾದ ಮೇಲ್ಮನವಿಗಳಲ್ಲಿ ಒತ್ತಾಯಿಸಲಾದ ಕಾರಣಗಳಿಗೆ ವಿಶ್ವಾಸಾರ್ಹತೆ ನೀಡಲು ಈ ಚಟುವಟಿಕೆಗಳು ನಡೆದ ಸೀಮಿತ ಅವಧಿಯನ್ನು ಗಮನಿಸಲಾಗಿದೆ. ಪ್ರಾಸಿಕ್ಯೂಷನ್‌ನ ಪ್ರಕರಣದ ಮೂಲಕ್ಕೆ ದಕ್ಕೆಯಾಗಿದೆ ಅಥವಾ ಅನುಮಾನಾಸ್ಪದವಾಗಿ ಪರಿಗಣಿಸಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ದೂರಿನ ಕರಡನ್ನು ವಕೀಲರೊಬ್ಬರು (ಪಿಡಬ್ಲ್ಯು–24) ಸಿದ್ಧಪಡಿಸಿದ್ದಾರೆ, ಆದರೆ ಅರ್ಜಿದಾರನು ಪೊಲೀಸ್ ಸಿಬ್ಬಂದಿಯ ಸಹಾಯದಿಂದ ಸಿದ್ಧಪಡಿಸಿಲ್ಲ ಎಂದು ಆರೋಪಿಸಲಾಗಿದೆ. ಇದು ಪ್ರಾಸಿಕ್ಯೂಷನ್ ಪ್ರಕರಣದ ಬಗ್ಗೆ

ಅನುಮಾನವನ್ನು ಮೂಡಿಸುತ್ತದೆಯೇ? ನಮ್ಮ ಪರಿಗಣಿತ ದೃಷ್ಟಿಯಲ್ಲಿ ಅಂತೂ ಇಲ್ಲ. ಏಕೆಂದರೆ, ಪ್ರತಿವಾದಿಗಳು ಸ್ಥಳದಲ್ಲೇ ತಮ್ಮ ಉಪಸ್ಥಿತಿಯನ್ನು ಒಪ್ಪಿಕೊಂಡಿರುವುದನ್ನು ಮತ್ತು ಸ್ವತಂತ್ರ ಸಾಕ್ಷಿಗಳು ಪ್ರತಿಯೊಬ್ಬ ಆರೋಪಿಯ ನಿಖರ ಪಾತ್ರವನ್ನು ವಿವರಿಸಿರುವುದನ್ನು ನಾವು ಗಮನಿಸಿದ್ದೇವೆ.

ಒಂದು ಹತ್ಯೆಯನ್ನು ಮಾಡಲಾಗಿದೆ ಎಂಬುದನ್ನು ಎರಡೂ ವಿಚಾರಣಾ ನ್ಯಾಯಾಲಯಗಳು ಸ್ಪಷ್ಟವಾಗಿ ಮತ್ತು ಸಮಾನವಾಗಿ ಒತ್ತಿ ಹೇಳಿದೆ. ನಂತರ ನಮ್ಮ ಮುಂದೆ ಇರುವ ಮೇಲ್ಮನವಿದಾರರು ವಿಶೇಷ ಪರಿಸ್ಥಿತಿಗಳ ಅಸ್ತಿತ್ವವನ್ನು ಅಥವಾ ನ್ಯಾಯಾಲಯಗಳು ತೆಗೆದುಕೊಂಡ ವಿಷಯಕ್ಕೆ ವಿರುದ್ಧವಾದ ಯಾವುದೇ ಸಂಭವನೀಯ ಸತ್ಯವನ್ನು ಇದರಲ್ಲಿ ಯಾವುದನ್ನು ಪ್ರಶ್ನಿಸಲು ಬಯಸುವರೋ ಅದನ್ನು ಸ್ಥಾಪಿಸಬೇಕು.

23. ಎಂಟು ಜನರನ್ನು (ಈಗ ಆರು, ಇಬ್ಬರ ಸಾವಿನ ನಂತರ ಅವರ ವಿರುದ್ಧ ಮೊಕದ್ದಮೆ ರದ್ದು ಮಾಡಲಾಗಿದೆ) ದೋಷಿಗಳೆಂದು ತೀರ್ಮಾನಿಸಲು ಏಕೈಕ ಸಾಕ್ಷಿಯನ್ನು ಅವಲಂಬಿಸಿರುವುದು ಮಿತಿಮೀರಿದ್ದು ಎಂಬುದು ಪ್ರಾಥಮಿಕ ನಿವೇದನೆಯಾಗಿತ್ತು. ಪಿಡಬ್ಲ್ಯು–1ರ ಸಾಕ್ಷ್ಯದ ಸತ್ಯತೆಯನ್ನು ವಾಗ್ದಂಡನೆಗೆ ಒಳಪಡಿಸಲು, ವಕೀಲರು ಏನನ್ನು ಸೂಚಿಸಬಹುದು ಎಂಬ ನ್ಯಾಯಾಲಯದ ನಿಖರ ಪ್ರಶ್ನೆಗೆ ಉತ್ತರವೆಂದರೆ, ಹಲವಾರು ಬಾಹ್ಯ ಅಂಶಗಳನ್ನು ಮತ್ತು ಇತರ ಸಾಕ್ಷಿಗಳ ಸಾಕ್ಷ್ಯಗಳನ್ನು ನೋಡಿದಾಗ, ವಿಶ್ವಾಸಾರ್ಹತೆಯನ್ನು ನಾಶಪಡಿಸುವ ಅಂಶಗಳು ಅಸ್ತಿತ್ವದಲಿದ್ದು–ನಮ್ಮ

ಮನಸ್ಸಿಗೆ ಹಸ್ತಕ್ಷೇಪ ಯೋಗ್ಯವಲ್ಲ ಎಂದು ಕಂಡು ಬಂದಿವೆ. **ಜಗದೀಶ್ ವಿರುದ್ಧ ಹರಿಯಾಣ ರಾಜ್ಯ** [**(2019) 7 ಎಸ್‌ಸಿಸಿ 711**] ಪ್ರಕರಣದಲ್ಲಿ ಈ ನ್ಯಾಯಾಲಯವು ಗಮನಿಸಿದಂತೆ ಹೆಚ್ಚಿನ ಪರಿಶೀಲನೆ ಅಗತ್ಯವು, ಅತೃಪ್ತಿದಾಯಕ ಎಂದು ಒತ್ತಿ ಹೇಳಲು ಸುತ್ತಮುತ್ತಲಿನ ಸಾಕ್ಷ್ಯಾಧಾರಗಳನ್ನು ವಿಶ್ವಾಸಾರ್ಹತೆಯ ಪ್ರಶ್ನೆಗೆ ಒಳಪಡಿಸಬೇಕಾಗುವುದು ಆದರೆ ಇಲ್ಲಿ ಆ ಕೆಲಸ ಮಾಡಲಾಗಿಲ್ಲ. ಮುಖ್ಯ ವಿಚಾರಣೆಯಲ್ಲಿ ಪಿಡಬ್ಲ್ಯು–7 ನೀಡಿದ ದಾಖಲಾತಿಗಳು ವಿವಾದಿತವಾಗಿಲ್ಲ ಮತ್ತು ಈ ಹಿಂದೆ ಗಮನಿಸಿದಂತೆ, ಯಾವುದೇ ಆರೋಪಿಗಳ ಉಪಸ್ಥಿತಿಯೂ ಸಹ ವಿವಾದಾಸ್ಪದವಾಗಿಲ್ಲ. ಮೇಲೆ ಹೇಳಿದ **ಮೃಣಾಲ್ ದಾಸ್, ರೋಹ್ತಾಶ್ ಕುಮಾರ್, ಕರಣ್ ಸಿಂಗ್ ಮತ್ತು ಕರುಣಾಕರನ್** ರಲ್ಲಿನ ತತ್ವಗಳ ಹಿನ್ನೆಲೆಯಲ್ಲಿ ಪಿಡಬ್ಲ್ಯು–1 ರ ಸಾಕ್ಷಿಯು ನಿಸ್ಸಂದೇಹವಾಗಿ ಆರೋಪಿಗಳ ಶಿಕ್ಷೆಗೆ ಆಧಾರವನ್ನು ಒದಗಿಸುತ್ತದೆ.

24. ಮೇಲೆ ಉಲ್ಲೇಖಿಸಿರುವ ಮಹತ್ತರವಾದ **ಮಸಲ್ತಿ** ಪ್ರಕರಣದ ತೀರ್ಪಿನಲ್ಲಿ ಪ್ರಾಸಿಕ್ಯೂಷನ್ ನಿರ್ದಿಷ್ಟ ವ್ಯಕ್ತಿಗಳಿಗೆ ನಿರ್ದಿಷ್ಟ ಕಾರ್ಯಗಳನ್ನು ಸಾಬೀತು ಪಡಿಸುವ ಅಗತ್ಯವಿಲ್ಲವೆಂಬುದನ್ನು ಎತ್ತಿ ಹಿಡಿದಿರುವ ಮಾನ್ಯ ನಾಲ್ಕು ಜನ ನ್ಯಾಯಾಧೀಶರ ನಿರ್ಧಾರವನ್ನು ಸಹ ನಾವು ಗಮನಿಸಿದ್ದೇವೆ. ಆರೋಪಿಗಳ ಸಂಖ್ಯೆ ಅಥವಾ ಅವರ ಉಪಸ್ಥಿತಿಯನ್ನು ವಿವಾದಿತ ಎಂದು ಪರಿಗಣಿಸದಿರುವುದರಿಂದ, ನಾವು ಕಾನೂನಿನೊಳಗೆ,

ಕೆಳಹಂತದ ನ್ಯಾಯಾಲಯಗಳು ಆರೋಪಿಗಳನ್ನು ತಪ್ಪಾಗಿ ಶಿಕ್ಷೆಗೆ ಗುರಿಪಡಿಸಿವೆ ಎಂದು ಪರಿಗಣಿಸಲು ಸಾಧ್ಯವಿಲ್ಲ.

25. ಪಿಡಬ್ಲ್ಯು–1 ಆಸಕ್ತ ಸಾಕ್ಷಿಯಾಗಿದ್ದು, ಮೃತ ವ್ಯಕ್ತಿಯ ಸಹೋದರನಾಗಿರುವುದಲ್ಲದೆ, ಏಕೈಕ ಸಾಕ್ಷಿಯಾಗಿರುವುದನ್ನು ಅಧಿವಿಚಾರಣಾ ನ್ಯಾಯಾಲಯವು ಅವಲಂಬಿಸಿರುವುದನ್ನು, ನಮ್ಮ ಮುಂದೆ ತೀರ್ಮಗಳನ್ನು ಪ್ರಶ್ನಿಸಲು ಒಂದು ಆಧಾರವಾಗಿ ಮಂಡಿಸಲಾಗಿದೆ. **ಹರ್ಬನ್ಸ್ ಕೌರ್ ವಿರುದ್ಧ ಹರಿಯಾಣ ರಾಜ್ಯ [(2005) ಎಸ್. ಸಿ. ಸಿ. 195]** ಪ್ರಕರಣದಲ್ಲಿ ಮಂಡಿಸಿರುವ ಕಾನೂನಿನ ಸ್ಥಾನವು, ಒಬ್ಬ ವ್ಯಕ್ತಿಯ ಹತ್ತಿರದ ಸಂಬಂಧಿಕನಾದ ಕಾರಣಕ್ಕೆ ಆತನ ಹೇಳಿಕೆಯನ್ನು ಅನುಮಾನಿಸುವಂಥ ಯಾವುದೇ ಕಾನೂನಿನ ಪ್ರತಿಪಾದನಗಳಿಲ್ಲವೆಂಬುದನ್ನು ಸ್ಪಷ್ಟವಾಗಿ ಎತ್ತಿ ಹಿಡಿದಿದೆ. **ಭಾಸ್ಕರರಾವ್ ವಿರುದ್ಧ ಮಹಾರಾಷ್ಟ್ರ ರಾಜ್ಯ [(2018) 6 ಎಸ್.ಸಿ.ಸಿ. 591]** ಪ್ರಕರಣದಲ್ಲಿ ಎಚ್ಚರಿಕೆಯ ಟಿಪ್ಪಣಿಯಿದೆ, ಅದು ನಿಸ್ಸಂದೇಹವಾದ ಅಂಶವಾಗಿದೆ, ಆದರೆ **ರಾಜೇಶ್ ಯಾದವ್ ವಿರುದ್ಧ ಉತ್ತರ ಪ್ರದೇಶ ರಾಜ್ಯ [2022 ಎಸ್‌ಸಿಸಿ ಆನ್‌ಲೈನ್ 150]** ಪ್ರಕರಣದಲ್ಲಿ ಈ ನ್ಯಾಯಾಲಯವು ಗಮನಿಸಿರುವ ಈ ಕೆಳಗಿನ ಅಂಶಗಳನ್ನೂ ಸಹ ನಾವು ಪರಿಗಣಿಸಬಹುದಾಗಿದೆ.

> "30. ಮತ್ತೊಮ್ಮೆ, ನಾವು ಎಚ್ಚರಿಕೆಯ ಪದದೊಂದಿಗೆ ಪುನರುಚ್ಚರಿಸುವುದೇನೆಂದರೆ ಮೇಲೆ ಹೇಳಿದ ಅಂಶಗಳ ಮೇಲೆ

ನಿರ್ಧರಿಸಲು ಅಧೀನ ನ್ಯಾಯಾಲಯಗಳೇ ಉತ್ತಮವಾಗಿವೆ," "ಸಾಕ್ಷಿಯೊಬ್ಬರ ಮೌಲ್ಯಮಾಪನದ ಮೇಲೆ ಯಾವುದೇ ಗಣಿತದ ಲೆಕ್ಕಾಚಾರ ಅಥವಾ ಸ್ಟ್ರೈಟ್ ಜಾಕೆಟ್ ಸೂತ್ರವನ್ನು ಮಾಡಲು ಸಾಧ್ಯವಿಲ್ಲ, ಏಕೆಂದರೆ ಸತ್ಯದತ್ತ ಸಾಗುವ ಪ್ರಯಾಣವನ್ನು ಅಧಿವಿಚಾರಣಾ ನ್ಯಾಯಾಧೀಶರ ಕಣ್ಣುಗಳ ಮೂಲಕ ಉತ್ತಮವಾಗಿ ನೋಡಬಹುದು. ವಾಸ್ತವವಾಗಿ, ಇದೆ ಕಾನೂನಿನ ಹಿಂದಿನ ನಿಜವಾದ ಉದ್ದೇಶವಾಗಿದೆ, ಇದು ನ್ಯಾಯಾಲಯಕ್ಕೆ ಗರಿಷ್ಠ ವಿವೇಚನಾಧಿಕಾರವನ್ನು ವಿಸ್ತರಿಸುತ್ತದೆ."

26. ನಾವು ಈಗಾಗಲೇ ಗಮನಿಸಿರುವಂತೆ, ಅಧೀನ ನ್ಯಾಯಾಲಯಗಳಿಗೆ ಪಿಡಬ್ಲ್ಯು–1ರ ಸಾಕ್ಷಿಯನ್ನು ನಂಬದಿರಲು ಯಾವುದೇ ಕಾರಣಗಳು ಕಂಡುಬಂದಿಲ್ಲ. ವಾಸ್ತವವಾಗಿ, ಅದಕ್ಕೆ ತದ್ವಿರುದ್ಧವಾದ ನಿಲುವಿಗೆ ಅವಲಂಬಿತವಾಗಿದೆ. **ಮೇಲಿನ ಭಗವಾನ್ ಜಗನ್ನಾಥ್ ಮರ್ಡ್, ರಾಜಸ್ಥಾನ ರಾಜ್ಯ ವಿರುದ್ಧ ಮದನ್ [(2019) 13 ಎಸ್‌ಸಿಸಿ 653]** ಪ್ರಕರಣದಲ್ಲಿನ ನಿರ್ಣಯಗಳನ್ನು ಗಮನಿಸಿದಾಗ ನಾವು ಈ ನಿಟ್ಟಿನಲ್ಲಿ ಮೇಲ್ಮನವಿದಾರರ ಪರ ಮಾನ್ಯ ವಕೀಲರ ವಾದಗಳನ್ನು ಒಪ್ಪಲು ಸಾಧ್ಯವಿಲ್ಲ.

27. ಮೇಲೆ ತಿಳಿಸಿದ ಹಿನ್ನೆಲೆಯಲ್ಲಿ, ಪ್ರಸ್ತುತಪಡಿಸಿದ ಸಲ್ಲಿಕೆಗಳನ್ನು, ಪುರಸ್ಕರಿಸಿದ ಮತ್ತು ವಿಶ್ಲೇಷಿಸಲಾದ ಕಾನೂನನ್ನು ಗಮನಿಸಿದಾಗ ಪ್ರಸ್ತುತ ಮೇಲ್ಮನವಿಗಳು ಕೊರತೆಯನ್ನು ಹೊಂದಿರುವುದನ್ನು ನಾವು ಕಂಡುಕೊಂಡಿದ್ದೇವೆ ಮತ್ತು ಆದ್ದರಿಂದ ಅವುಗಳನ್ನು ವಜಾಗೊಳಿಸಲಾಗಿದೆ. ಆರೋಪಿಗಳು, ಒಂದು ವೇಳೆ ಜಾಮೀನಿನ ಮೇಲೆ

ಇದ್ದಲ್ಲಿ, ಕೂಡಲೇ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಶರಣಾಗುವಂತೆ ನಿರ್ದೇಶಿಸಲಾಗಿದೆ.

ಬಾಕಿ ಇರುವ ಅರ್ಜಿಗಳು ಯಾವುದಾದರೂ ಇದ್ದರೆ, ತದನುಸಾರವಾಗಿ ವಿಲೆ ಮಾಡತಕ್ಕದ್ದು.

ನ್ಯಾಯಾಧೀಶರು

(ಬಿ. ಆರ್. ಗವಾಯಿ)

ನ್ಯಾಯಾಧೀಶರು

(ವಿಕ್ರಂ ನಾಥ್)

ನ್ಯಾಯಾಧೀಶರು

(ಸಂಜಯ್ ಕರೋಲ್)

ದಿನಾಂಕ: 16 ಮಾರ್ಚ್, 2023

ಸ್ಥಳ: ನವದೆಹಲಿ

ಕ್ಲೇಮು ನಿರಾಕರಣೆ

“ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರು ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವುದಕ್ಕಾಗಿ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.”